ಕೊನೆಯದಾಗಿ ಇವೊತ್ತಿನ ದಿವಸ ಬೆಂಗಳೂರಿನ ಕಾಲೇಜುಗಳಲ್ಲಿ ಏನು ಒಂದು ಗೊಂದಲ ಹಾಗೂ ಕಳವಳ ಪರಿಸ್ಥಿತಿ ಇದೆ, ಅದನ್ನು ಹೋಗಲಾಡಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

೧೧–೫೦ ಎ. ಎಂ.

ಶ್ರೀ ಧರ್ಮಸಿಂಗ್ (ಪೌರಾಡಳಿತ ಮಂತ್ರಿಗಳು).—ಕಾಲೇಜಿನಲ್ಲಿರತಕ್ಕಂಥಾ ವಿದ್ಯಾರ್ಥಿಗಳಿಗೆ ಸರ್ಕಾರ ಪ್ರಚೋದನೆ ಮಾಡುತ್ತಾ ಇದೆ ಅನ್ನುವುದನ್ನು ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದು ಸತ್ಯಕ್ಕೆ ದೂರವಾದಂಥಾ ಮಾತು ಎಂದು ಹೇಳುತ್ತೇನೆ. ಆ ರೀತಿಯಾಗಿ ಯಾರೂ ಪ್ರಚೋದನೆ ಮಾಡುತ್ತಾ ಇಲ್ಲ.

ಶ್ರೀ ಪಿ. ರಾಂದೇವ್.—ಸ್ವಾಮಿ, ನಾನು ಹೇಳಿದ್ದಲ್ಲ, ಈ ವಿಚಾರ ಪತ್ರಿಕೆಯಲ್ಲೇ ಬಂದಿದೆ. ಈತ ಕಾಂಗ್ರೆಸ್ (ಐ) ಪಕ್ಷಕ್ಕೆ ಸೇರಿದವನೆಂದು. ನೀವು ಇಲ್ಲ ಎಂದು ಹೇಳುತ್ತೀರಿ. ಇನ್ನೊಬ್ಬ ದಿವಾಕರ್ ಹೆಗ್ಗಡೆ ಅನ್ನುವವರು ಯಾವ ಪಕ್ಷಕ್ಕೆ ಸೇರಿದ್ದಾರೋ ಅನ್ನುವುದು ತಮಗೆ ಗೊತ್ತಿರಬೇಕು. ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ಶ್ರೀ ಧರ್ಮಸಿಂಗ್.—ಈ ಒಂದು ಘಟನೆಗೆ ಯಾರು ಕಾರಣರಾಗಿರುತ್ತಾರೋ ಸಂಬಂಧಪಟ್ಟವರ ಮೇಲೆ ನಿಷ್ಪಕ್ಷಪಾತ ದೃಷ್ಟಿಯಿಂದ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಮೇಲಾಗಿ ಈ ಕ್ಲಾಷ್ ಪಕ್ಷಕ್ಕೆ ಸಂಬಂಧಪಟ್ಟದ್ದಾಗಿಲ್ಲ. ನಾವು ಈಗಾಗಲೇ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ತಮಗೆ ಹೇಳಬೇಕಾದರೆ ಶ್ರೀ ಆಂಜನಪ್ಪನವರು ಕೊಲೆ ಮಾಡಿದರೆಂದು ಅವರ ಮೇಲೆ ಕೊಲೆ ಮೊಕದ್ದಮೆಯನ್ನು ದಾಖಲೆ ಮಾಡಿದ್ದೇವೆ ಇನ್ನೊಬ್ಬ ದಿವಾಕರ್ ಹೆಗ್ಗಡೆ ಏನು ಇದ್ದಾರೆ ಅವರನ್ನು ಪತ್ತೆ ಮಾಡಲು ಡೆಲ್ಲಿ ಪೋಲೀಸ್‌ನವರಿಗೂ ವರ್ತಮಾನ ಕೊಟ್ಟಿದ್ದೇವೆ ಅಲ್ಲದೆ ರಾಜ್ಯದ ಎಲ್ಲಾ ಪೋಲೀಸ್ ಸ್ಟೇಷನ್ಸ್‌ಗಳಿಗೂ ಕೂಡ ಫೋಟೋ ಕಳುಹಿಸಿದ್ದೇವೆ ದಿವಾಕರ್ ಹೆಗ್ಗಡೆ ಏನೂ ಆಲ್ ಇಂಡಿಯಾ ಲೆವಲ್‌ನಲ್ಲಿ ಲೀಡರ್ ಆಗಿಲ್ಲಾ ಅಥವಾ ಸ್ಟೇಟ್ ಲೀಡರ್ ಅಲ್ಲ. ಆದರಿಂದ ಅಷ್ಟು ಬೇಗನೆ ಪೋಲೀಸರು ಅವನನ್ನು ಗುರುತಿಸುವುದಕ್ಕಾಗುವುದಿಲ್ಲ. ಅವನು ಒಬ್ಬ ವಿದ್ಯಾರ್ಥಿ ಅಷ್ಟೆ. ಅದಕ್ಕೆ ಗುರುತಿಸಲು ಸ್ವಲ್ಪ ತೊಂದರೆಯಾಗಿದೆ.

ಶ್ರೀ ಪಿ. ರಾಂದೇವ್.—ಅವನು ಇಲ್ಲೇ ಇದ್ದಾನೆ, ನಿಮ್ಮ ಜೊತೆಯಲ್ಲೇ ಇದ್ದಾನೆ. ನೀವು ನಿಷ್ಪಕ್ಷಪಾತವಾಗಿ ತನಿಖೆ ಮಾಡಬೇಕು.

ಶ್ರೀ ಧರ್ಮಸಿಂಗ್.—ನಾವು ನಿಷ್ಪಕ್ಷಪಾತವಾಗಿಯೇ ತನಿಖೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ನಿನ್ನೆ ದಿವಸದಿಂದ ಆರ್.ಸಿ. ಕಾಲೇಜಿನಲ್ಲಿ ಹಂಗರ್ ಸ್ಟ್ರೈಕ್ ಅನ್ನು ಆ ಹುಡುಗರು ಏನು ಮಾಡುತ್ತಿದ್ದರು ಅಲ್ಲಿಗೆ ಡೆಪ್ಯೂಟಿ ಕಮೀಷನರ್ ಆಫ್ ಪೋಲೀಸ್ ಹೋಗಿ ಮಾತನಾಡಿದ್ದಾರೆ. ಅವರು ಹಂಗರ್ ಸ್ಟ್ರೈಕ್ ಅನ್ನು ನಿಲ್ಲಿಸುತ್ತೇವೆ, ಅವನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆ ಅಂತ ಹೇಳಿದ್ದಾರೆ. ಅವರು ಹೀಗೆ ವಾಪಸ್ಸು ತೆಗೆದುಕೊಳ್ಳುವ ಪ್ರಯತ್ನ ನಡೆಯುತ್ತಾ ಇದೆ. ಮತ್ತು ರಾಜ್ಯದಲ್ಲಿ ಲಾ ಅಂಡ್ ಆರ್ಡರ್ ಸರಿಯಾಗಿ ನೋಡಿಕೊಳ್ಳುತ್ತಾ ಇಲ್ಲ ಎಂದು ಹೇಳಿದ್ದಾರೆ. ಹಾಗೇನೂ ಇಲ್ಲ. ಲಾ ಅಂಡ್ ಆರ್ಡರ್ ಅನ್ನು ಸರ್ಕಾರ ಚೆನ್ನಾಗಿ ನೋಡಿಕೊಳ್ಳುತ್ತಾ ಇದೆ. ಆ ಬಗ್ಗೆ ಯಾವ ಅನುಮಾನ ಪಡಬೇಕಾದ್ದಿಲ್ಲಾ. ಈವೊತ್ತಿನ ದಿವಸ ಈ ಕಾಲೇಜಿನಲ್ಲಿ ಏನು ಘಟನೆ ನಡೆಯಿತು ಅದರ ಬಗ್ಗೆ ಸರ್ಕಾರ ನಿಷ್ಪಕ್ಷಪಾತ ದೃಷ್ಟಿಯಿಂದ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ.

(*ii*) *re* :—*Demolition of houses built by poor people in several areas of Bangalore city, by the Bangalore Development Authority.*

SRI D. DEVARAJ URS.—I call the attention of the Hon'ble Minister for Housing and Urban Development regarding the activities of the Bangalore Development Authority in so far as its Scheme of

demolishing the existing houses bulit by poor people in several areas of Bangalore City wherein thousands and thousands of houses and lakhs of people are involved. I would like to know what the Government has decided in the matter.

SRI DHARAM SINGH (Minister for Housing and Urban Development).—Sir, I wish to make the following statement :—

The Bangalore Development Authority is entrusted with the respensibility of forming layouts around Bangalore for the purpose of providing sites to the needy. The Bangalore Development Authority has, on hand, 11 schemes mentioned below :

1. Nandini Layout
2. Kamakshi Layout
3. Chandra Layout
4. Further extension of Mahalakshmi Layout
5. Rajmahal Vilas II Stage
6. Further extension of Mathadahalli Layout
7. Layout between Hennur Road and Bellary Road
8. Layout between Banaswadi Road and Hennur Road
9. Layout between Old Madras Road and Banaswadi Road
10. Byrasandra Madivala, Tavarekere Scheme
11. Pillanna Garden III Stage.

These schemes cover an extent of about 6000 acres with the intention of forming about 43,000 sites. They were sanctioned prior to the year 1978–79 and are in several stages of implementation. Between the time of preliminary notification and now, the process of aquisition of these lands has not been quick enough as many procedural and legal formalities are to be complied with. The introduction of the Urban Land (Ceiling and Regulation) Act, has also contributed to the delay. It is also pertinent to note that the lands required for the layout could not always be acquired in contiguous bits and in bulk. During these years a number of unauthorised and haphazard constructions have come up in these layouts in utter disregard to the laws and detrimental to the plass of the Bangalore Development Authority.

During the past few months, the Bangalore Development Authority has taken up the task of implementing the schemes in right earnest. This in effect, means the formation of Roads and drains according to the approved plans and also having regard to the

master plans of greater Bangalore. In this process it was noticed by the Authority that several unauthorised structures stood in the way of the formation of the planned roads and drainages. Unless these obstructions were cleared, it was not possible for the authority to go ahead with the execution of the schemes and further unless the layout was formed according to the sanctioned plan it would be impossible to have the basis necessity viz. water and sewerage lines etc. Therefore it was inevitable for the authority to clear the obstructions. In this process a few structures were demolished as detailed below :

1.	Chandra Layout	...	70
	(45 structures and 25 huts)		on 5-11-1981
2.	Jarakabande Kaval	...	12 huts on 7-11-1981
3.	Tavarekere	...	22 structures under construction on 5-2-1982.

These unauthorised structures had come up on the lands acquired by the Bangalore Development Authority even without sanction of any local authority, let alone the Bangalore Development Authority to whom the land legitimately belongs to. Such unauthorised constructions in a hapazard manner can no longer be allowed to continue in the midst of planned development, taken up by the Bangalore Development Authority.

No houses have been demolished either in Kamakshi layout or in Nandini Layout. It is pertinent to note here that wherever the Bangalore Development Authority has demolished the structures, care has been taken up to provide alternative sites to the deserving persons affected. Care has also been exercised by the Bangalore Development Authority to see that only a very few structures, that come in the way of the formation of the roads are removed. It is only be demolishing these few unauthorised structures, that

The Bangalore Development Authority would be in a position to form more number of sites for alloting to the public including poor and at the same time ensure the basic amenities.

This action of the Bangalore Development Authority has been appreciated by the City Legislators and the City M.P's in their recent meeting held on 10-2-1982.

While the Bangalore Development Authority is taking steps to protect the interest of the affected poor people it cannot sacrifice the planned and proper growth of the City, which is one of its responsibility.

Such vigorous action on the part of the BDA has started putting an end to the illegal and speculative activities of the middleman. It is these middlemen who have been raising hue and cry in the name of the few affected.

In this connection I am happy to bring to the notice of this August House that the Bangalore Development Authority has planned to provide 1000 free sites in the newly formed layout in Tavarekere Madivala Scheme, to the Urban siteless and the needy people and the title deed will be given on 6-2-1982 by the Hon'ble Chief Minister.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಮಂತ್ರಿಯವರು ಈ ಸಭೆಯ ಮುಂದೆ ಕೊಟ್ಟಂತಹ ವಿವರಣೆಯನ್ನು ನಾವೆಲ್ಲಾ ಕೇಳಿದ್ದೇವೆ. ಅದರಲ್ಲಿ ೧೧ ಲೇಔಟ್ಸ್ ಇದೆ, ೬೧ ಸ್ಕೀಮ್‌ಗಳು ಇವೆ. ಸುಮಾರು ೬೦೦೦ ಎಕರೆಗೆ ಅದು ಒಳಪಟ್ಟಿದೆ. ಸುಮಾರು ೪೩ ಸಾವಿರ ಸೈಟುಗಳನ್ನು ಮಾಡುತ್ತೇವೆ ಎಂದು ಅವರು ಒಂದು ಕಡೆ ಹೇಳಿದ್ದಾರೆ. ಅದರಲ್ಲಿ ಡೆಮಾಲಿಷ್ ಮಾಡಿರ ತಕ್ಕಂಥಾದ್ದು ಯಾವ್ಯಾವುದು ಎಂಬುದನ್ನೂ ಸಹ ಅವರು ಹೇಳಿದ್ದಾರೆ. ಈ ಚಂದ್ರ ಲೇಔಟ್, ತಾರಕಬಂಡೆ ಕಾವಲ್, ತಾವರೇಕೆರೆ ಈ ೩ ಕಡೆಗಳಲ್ಲಿ ಸ್ಪಷ್ಟವಾಗಿ ತೆಗೆದಿದ್ದೇವೆ ಎಂದು ಅವರು ಹೇಳಿದ್ದಾರೆ. ಅವರಿಗೆ ಅಲ್ಟರ್‌ನೇಟಿವ್‌ಸೈಟ್ಸ್ ಕೊಟ್ಟಿದ್ದಾರೆಯೋ ಇಲ್ಲವೋ ಅಥವಾ ಕೊಡುವುದು ಇದೆಯೋ—ಏನು ಎಂಬುದು ನಮಗೆ ಗೊತ್ತಾಗಲಿಲ್ಲ. ಅವರೇನೋ ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದಾರೆ.

ಶ್ರೀ ವೈ. ರಾಮಕೃಷ್ಣ.—ಲಾಸ್ಟ್ ಸೆನ್ಟೆನ್ಸ್‌ನಲ್ಲಿ ಅದನ್ನು ಹೇಳಿದ್ದೇವೆ.

SRI D. DEVARAJ URS.—It is said here that where BDA has demolished the structure, care has been taken to provide alternative sites. ನಾನು ಕೇಳುತ್ತಾ ಇರುವುದು ಏನೆಂದರೆ, whether you have demolished 10 or 100, that is another question. You have said that care has been taken to provide alternative sites. That means-whether you have provided or whether you are going to provide.

ಶ್ರೀ ವೈ. ರಾಮಕೃಷ್ಣ.—ಸೈಟ್ಸ್ ಪ್ರೊವೈಡೆಡ್.

ಶ್ರೀ ಡಿ. ದೇವರಾಜ ಅರಸ್.—ಈ ಪ್ರೊವೈಡೆಡ್ ಎನ್ನುವುದರಲ್ಲಿ ಕೊಶ್ಚನ್ ಮಾರ್ಕ್ ಇದೆ. ನನಗೆ ಗೊತ್ತಿರುವಹಾಗೆ ಮೈಸೂರಿಗೆ ಹೋಗುವ ದಾರಿಯಲ್ಲಿ ಇರತಕ್ಕಂಥ ಚಂದ್ರ ಲೇಔಟ್‌ನಲ್ಲಿ ಬಿ.ಡಿ.ಎ. ಯವರು ಸುಮಾರು ೮೦-೯೦ ಗುಡಿಸಲುಗಳನ್ನು ಡೆಮಾಲಿಷ್ ಮಾಡಿಸಿದ್ದಾರೆ. ಅವರು ಡೆಮಾಲಿಷ್ ಮಾಡಿರತಕ್ಕಂಥ ಸ್ಥಳಕ್ಕೆ ನಾನು ಹೋಗಿ ನೋಡಿದ್ದೇನೆ. ಅವರು ಡೆಮಾಲಿಷ್ ಮಾಡುವುದಕ್ಕೆ ಮೊದಲಿಗೆ ಲೀಗಲ್ ಆಗಿ ಬಿ.ಡಿ.ಎಯವರಿಗೆ ಆ ಬಗ್ಗೆ ಅಥಾರಿಟಿ ಇದೆಯೋ ಇಲ್ಲವೇ ಎನ್ನುವುದು ಒಂದನೆಯ ಪ್ರಶ್ನೆ. ಅದರ ಬಗ್ಗೆ ನಾನು ಡೀಟೈಲ್ ಆಗಿ ಹೇಳುವುದಕ್ಕೆ ಹೋಗುವುದಿಲ್ಲ. ನನಗೆ ತಿಳಿದ ಹಾಗೆ ಬಿ ಡಿ.ಎಯವರು ಗುಡಿಸಲುಗಳನ್ನು ಡೆಮಾಲಿಷ್ ಮಾಡುವುದಕ್ಕೆ ಹೋಗಿದ್ದಾರೆ. ಉದಾಹರಣೆಗೆ ಹೇಳಬೇಕಾದರೆ ಮೊನ್ನೆ ೧೦ನೇ ತಾರೀಖಿನ ದಿವಸ ಇಂಡಿಯನ್ ಎಕ್ಸ್‌ಪ್ರೆಸ್ ದಿನಪತ್ರಿಕೆಯ ಫಸ್ಟ್ ಪೇಜ್‌ನಲ್ಲಿ Unruly mobteargas in the City' ಎಂದು ಹಾಕಿದ್ದಾರೆ. ಅಲ್ಲಿ ಟಿಯರ್‌ಗ್ಯಾಸ್ ಏತಕ್ಕೆ ಮಾಡಿದರು ಎಂದರೆ ಬಿ.ಡಿ.ಎ. ಸ್ಕ್ವಾಡ್ ಕಾಮಾಕ್ಷಿ ಪಾಳ್ಯದಲ್ಲಿರತಕ್ಕಂಥ ನಂದಿನಿ ಲೇಔಟ್‌ಗೆ ಹೋಗಿ ಇಲ್ಲಿ ಮನೆಗಳನ್ನು ಕಟ್ಟುವುದಕ್ಕಾಗಿ ಡೀಮಾರ್ಕೇಷನ್ ರೋಡ್ ಮಾಡುತ್ತೇವೆ ಎಂದು ಹೇಳಿದರು. ಜನರು ಅಲ್ಲಿ ರೋಡ್ ಮಾಡುವುದಕ್ಕೆ ಬಿಡುವುದಿಲ್ಲ ಎಂದು ಹೇಳಿದರು. ಬಿ.ಡಿ.ಎ. ಸ್ಕ್ವಾಡ್ ಗಲಾಟೆ ಮಾಡಿದರು. ಜನರೆಲ್ಲಾ ಬಂದು ಸೇರಿದರು. ಅನಂತರ ಪೋಲೀಸರು ಬಂದು ಟಿಯರ್ ಗ್ಯಾಸ್ ಮಾಡಿದರು. ಬಿ.ಡಿ.ಎಯವರು ಯಾವ ಸರ್ವೆ ನಂಬರ್‌ನಲ್ಲಿ ಡಿಮಾರ್ಕ್ ಮಾಡುವುದಕ್ಕೆ ಹೋಗಿದ್ದಾರೋ ಅಲ್ಲಿ ಹೈ ಕೋರ್ಟ್ ಸ್ಟೇ ಆರ್ಡರ್ ಇದೆ. ಹೈಕೋರ್ಟ್‌ನ ಸ್ಟೇ ಆರ್ಡರ್ ಸರ್ವೆ ಆಗಿದೆ.

ಅದಕ್ಕೆ ಆಧಾರಗಳೂ ಸಹ ಇದೆ. ಹೈಕೋರ್ಟ್‌ನಿಂದ ೨೫-೧೧-೧೯೮೨ ತಲ್ಲಿ ಸ್ಟೇ ಆರ್ಡರ್ ಕೊಟ್ಟಿದ್ದಾರೆ ಈ ಲೆಗ್ಗೆರ್ ವಿಲೇಜ್‌ನಲ್ಲಿ ಈ ನಂಬಿನಿ ಲೇಔಟ್ ಬರುತ್ತದೆ. ಹಾನರಬಲ್ ಚೀಫ್ ಜಸ್ಟೀಸ್ ಶ್ರೀ ಎಚ್. ಸಿ. ದೊಡ್ಡಕಾಳೇಗೌಡ ಅವರು ಅವರ ಕೋರ್ಟಿನಲ್ಲಿ ಈ ಡೆವಲಪ್‌ಮೆಂಟ್ ಆಫ್ ಹೌಸಸ್ ವಿಚಾರದಲ್ಲಿ ಸರ್ವೆ ನಂ. ೫೬ಳಿ ಮತ್ತು ೧೭೦ ರಲ್ಲಿ ಈ ಮನೆಗಳನ್ನು ಡೆವಲಪ್‌ಮೆಂಟ್ ಮಾಡಕೂಡದು, ಇದನ್ನು ತಡೆಹಿಡಿದ್ದೇವೆ ಎಂದು ಹೇಳಿ ಅವರು ಒಂದು ನೋಟಿಫಿಕೇಷನ್ ಕ್ವೋಟ್ ಮಾಡಿ "Same is hereby stayed" ಎಂದು ಒಂದು ಆದೇಶ ಕೊಟ್ಟರು. ಇದನ್ನು ೨೫-೧೧-೧೯೮೨ರ ರಾತ್ರಿ ಕೊಟ್ಟಿರತಕ್ಕಂಥಾದ್ದು ಇದೆ. ಇದರಲ್ಲಿ ಇಂಟರ್‌ಸ್ಟೆಡ್ ಪಾರ್ಟೀಸ್ ಯಾರಿದ್ದಾರೋ ಅವರು ಅಂದರೆ ಯಾರು ಸ್ಟೇ ಆರ್ಡರ್ ತಂದಿದ್ದಾರೋ ಅವರು ಚೇರ್ಮನ್‌ರವರಿಗೆ ಟೆಲಿಗ್ರಾಂ ಸಹ ಕೊಟ್ಟಿದ್ದಾರೆ. ಏನೆಂದು ಕೊಟ್ಟಿದ್ದಾರೆ ? ಸ್ವಾಮಿ, ಹೈಕೋರ್ಟ್ ಸ್ಟೇ ಇದೆ, ಈ ಡೆವಲಪ್‌ಮೆಂಟ್ ಆಫ್ ಹೌಸಸ್ ವಿಚಾರದಲ್ಲಿ ಸ್ಟೇ ಬಂದಿರುವುದರಿಂದ ಮನೆಗಳನ್ನು ಒಡೆದು ಹಾಕತಕ್ಕಂಥಾದ್ದನ್ನು ತಡೆಹಿಡಿಯಬೇಕು. ಬಿ.ಡಿ.ಎ. ಸ್ಕ್ವಾಡ್‌ನವರು ಇಲ್ಲಿಗೆ ಬರಕೂಡದು ಎಂದು ಅವರಿಗೆ ಟೆಲಿಗ್ರಾಂ ಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ಚೇರ್ಮನ್‌ರವರಿಗೆ ಒಂದು ಪಿಟೀಷನ್ ಕೊಟ್ಟು ಹೈಕೋರ್ಟ್ ಸ್ಟೇ ಆರ್ಡರ್ ಆಗಿದೆ ಎಂಬುದನ್ನು ಅದರಲ್ಲಿ ಹೇಳಿ ಬಿ.ಡಿ.ಎ. ಅವರಿಂದ ಒಂದು ಸರ್ಟಿಫಿಕೇಟ್ ಕೂಡ ತೆಗೆದುಕೊಂಡಿದ್ದಾರೆ. ೨೫ನೇ ತಾರೀಖು ಸ್ಟೇ ಆರ್ಡರ್ ತೆಗೆದುಕೊಂಡಿದ್ದು, ಅದರ ಮಾರನೆಯ ದಿವಸ ಇಮ್ಮೆಡಿಯಟ್ ಆಗಿ ಬೆಳಿಗ್ಗೆ ಅಪ್ಲಿಕೇಷನ್ ಸಹಿತ ಬಿ.ಡಿ.ಎ. ಚೇರ್ಮನ್ ಹತ್ತಿರ ಹೋಗಿ ಹೈಕೋರ್ಟ್ ಆರ್ಡರ್ಸ್ ಕಾಪಿಯನ್ನು ಅವರಿಗೆ ಕೊಟ್ಟು ಅವರಿಂದ ಒಂದು ಸರ್ಟಿಫೈಡ್ ಕಾಪಿಗೆ ಸೀಲು ಒತ್ತಿಸಿಕೊಂಡಿದ್ದಾರೆ. ಅಂದರೆ ಬಿ.ಡಿ.ಎ.ಯವರು ಗೊತ್ತಿಲ್ಲದೇ ಮನೆಗಳನ್ನು ಒಡೆದು ಹಾಕಿ ಯಾರು ಎಂದು ಹೇಳಿ ಅವರು ಇಷ್ಟೆಲ್ಲಾ ಪ್ರೂಫ್‌ಗಳನ್ನು ತೆಗೆದುಕೊಂಡಿದ್ದಾರೆ. ಇಷ್ಟೆಲ್ಲಾ ಆದರೂ ಕೂಡ ಬಿ.ಡಿ.ಎ. ಸ್ಕ್ವಾಡ್‌ನವರು ಹೈಕೋರ್ಟ್ ಸ್ಟೇ ಆರ್ಡರನ್ನು ಉಲ್ಲಂಘನೆ ಮಾಡಿ ೧೦ನೇ ತಾರೀಖು ಅಲ್ಲಿಗೆ ಹೋದರು. ಅಲ್ಲಿ ಮನೆಗಳನ್ನು ಒಡೆಯುವುದಕ್ಕೆ ಅವರು ಹೋದರು. ಅವರು ಡೀಮಾರ್ಕೆಟ್ ಮಾಡುವುದಕ್ಕೆ ಅಲ್ಲಿಗೆ ಹೋದರು ಅಂತ ಇವರು ಹೇಳುತ್ತಾರೆ. ಆದರೆ ಅವರು ಡಿಮಾರ್ಕೆಟ್ ಮಾಡುವುದಕ್ಕೆ ಹೋದರೋ ಅಥವಾ ಮನೆಗಳನ್ನು ಒಡೆಯುವುದಕ್ಕೆ ಹೋದರೋ ಸರಿಯಾಗಿ ಗೊತ್ತಿಲ್ಲ ಅಲ್ಲಿ ಸ್ಕ್ವಾಡ್‌ನವರು ಗಲಾಟೆ ಮಾಡಿದರು. ಜನರು ಅಲ್ಲಿ ಸೇರಿದರು. ಅವರಲ್ಲಿ ೧೮ ಜನರನ್ನು ಅರೆಸ್ಟ್ ಮಾಡಿದರು. ಇದಕ್ಕೆ ಸಂಬಂಧಪಟ್ಟ ಹಾಗೆ ಅಲ್ಲಿಯ ನಿವಾಸಿಗಳಲ್ಲಿ ಒಬ್ಬರು ಮಾನ್ಯ ಮುಖ್ಯಮಂತ್ರಿಯವರಿಗೆ ಕೂಡ ೨೧-೧೧-೧೯೮೨ರಲ್ಲಿ ಒಂದು ಮನವಿಯನ್ನು ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರೂ ಸಹ ಅದಕ್ಕೆ ಅವರ ಆಫೀಸಿನಿಂದ ಉತ್ತರವನ್ನು ಅವರಿಗೆ ಕಳುಹಿಸಿದ್ದಾರೆ. "The Chief Minister has called for a report from the Commissioner, BDA, and he will be writing to you after some time" ಈ ನಿವಾಸಿ ಚೀಫ್ ಮಿನಿಸ್ಟರ್‌ಗೆ ಕೊಟ್ಟಂತಹ ಮನವಿಗೆ ಡೆಪ್ಯೂಟಿ ಸೆಕ್ರೆಟರಿಯವರಾದ ಶ್ರೀ ಪಾಂಡೆಯವರು ಚೀಫ್ ಮಿನಿಸ್ಟರ್ ಪರವಾಗಿ ಉತ್ತರ ಕಳಿಸಿಕೊಟ್ಟಿದ್ದಾರೆ. ಆಮೇಲೆ ಅವರು ಅಲ್ಲಿಗೆ ಹೋಗಿ ನೋಡಿದರೋ ಅಥವಾ ಇಲ್ಲವೋ ಇವರು ಏನು ಕೇಳಿದರೋ ಏನೂ ಹೊತ್ತಾಗುವುದಿಲ್ಲ. ಆದರೆ ಪರಿಣಾಮ ಏನಾಯಿತು ಎನ್ನುವುದು ಗೊತ್ತಾಯಿತು. ಪರಿಣಾಮ ಏನಾಯಿತು ಎಂದರೆ ೧೦ನೇ ತಾರೀಖಿನ ದಿವಸ ಬಿ.ಡಿ.ಎ. ಸ್ಕ್ವಾಡ್‌ನವರು ಮನೆಗಳನ್ನು ಒಡೆಯುವುದಕ್ಕೆ ಹೋದದ್ದೇ ಪರಿಣಾಮ. ಈ ಮಧ್ಯೆ ಹೈಕೋರ್ಟಿನವರು ಸ್ಟೇ ಆರ್ಡರ್ ಕೊಟ್ಟಿರುವುದನ್ನು ಗಮನಿಸದೇ ಬಿ.ಡಿ.ಎ.ಯವರು ನಾವು ಅಲ್ಲಿ ಲೇಔಟ್ ಮಾಡುವುದಕ್ಕೆ ಹೋಗುತ್ತಿದ್ದೇವೆ. ಅಲ್ಲಿ ಸ್ಲಮ್ ಡೆವೆಲಪ್ ಆಗಿದೆ, ನಮ್ಮ ಪ್ಲಾನ್ ಪ್ರಕಾರ ಅಲ್ಲಿ ಡೆವೆಲಪ್ ಮಾಡುವುದಕ್ಕೆ ತೊಂದರೆಯಾಗುತ್ತಿದೆ. ಗೂಂಡಾಗಳು ಬಂದು ನಮ್ಮ ಕಾರ್ಯಕ್ಕೆ ಅಡ್ಡಿ ಮಾಡುತ್ತಿದ್ದಾರೆ ಎಂದು ಒಂದು ಕಡೆ ಹೇಳುತ್ತಿದ್ದಾರೆ. ಹೈಕೋರ್ಟ್‌ನಿಂದ ಸ್ಟೇ ಆರ್ಡರ್ ತಂದಿರತಕ್ಕಂಥ ಜಾಗದಲ್ಲಿ ನೀವು ಹೋಗಿ ಆ ರೀತಿ ಜನಗಳಿಗೆ ತೊಂದರೆಯನ್ನು ಕೊಟ್ಟು ಪೋಲೀಸಿನವರನ್ನು ಕರೆದುಕೊಂಡು ಹೋಗಿ ಬೆದರಿಸುತ್ತಾ ಇರುವುದಕ್ಕೆ ನಾವು ಏನೆಂದು ಕರೆಯೋಣ ? ಇದಕ್ಕೆ ಗುಂಡಾಗಿರಿ ಎಂದು ಕರೆಯೋಣವೇ? ಅಥವಾ ಲಾಲ್‌ಸೆನೆಸ್ ಎಂದು ಹೇಳೋಣವೇ ? ಅಥವಾ ಏನು ಹೇಳೋಣ ಇದಕ್ಕೆ ? ಆ ಜನರ ಬಗ್ಗೆ ಗೂಂಡಾಗಳನ್ನು ಕರೆದುಕೊಂಡು ಬಂದು ನಮ್ಮ ಕೆಲಸಕ್ಕೆ ಅಡ್ಡಿ ಮಾಡುತ್ತಿದ್ದಾರೆ. ಬಿ.ಡಿ.ಎ. ಯವರು ಹೇಳುತ್ತಿದ್ದಾರೆ. ಅಲ್ಲಿ ಸ್ಟೇ ಇದ್ದರೂ ಕೂಡ ಕಾನೂನಿಗೆ ವಿರುದ್ಧವಾಗಿ ನಡೆಯುತ್ತಿರತಕ್ಕಂಥ ಈ ಬಿ.ಡಿ.ಎಯವರು ಎಂತಹ ಗೂಂಡಾಗಳು ಆಗುತ್ತಾರೆ. ಈ ಬಿ.ಡಿ.ಎಯವರು ಅವರಿಗಿಂತ ದೊಡ್ಡ

ಗೊಂಡಾಗಲು ಆಗುತ್ತಾರೆ. ಇದು ನಂದಿನಿ ಲೇಔಟ್‌ನಲ್ಲಿ ನಡೆದಿರತಕ್ಕಂಥ ವಿಚಾರ. ಈಗ ಇವರು ೧೧ ಸ್ಕೀಮ್‌ಗಳನ್ನು ಹಾಕಿಕೊಂಡು ೬೦೦೦ ಎಕರೆ ಪ್ರದೇಶದಲ್ಲಿ ಡೆವೆಲಪ್‌ಮೆಂಟ್ ವರ್ಕ್ ಮಾಡುವುದಕ್ಕೆ ಹೊರಟಿದ್ದಾರೆ. ಇದು ಮಾನ್ಯ ಮಂತ್ರಿಯವರು ಕೊಟ್ಟಿರತಕ್ಕಂಥ ಉತ್ತರದಲ್ಲೇ ಇದೆ. ಅಲ್ಲಿ ಇರುವುದು ೧೧ ಸ್ಕೀಮ್ ಅಲ್ಲ. ಅಲ್ಲಿ ೧೩ ಸ್ಕೀಮ್ ಇದೆ. ಆದರೆ ಅವರು ತೆಗೆದುಕೊಳ್ಳುತ್ತಾ ಇರುವುದು ೧೧ ಸ್ಕೀಮ್‌ಗಳಿಗೆ ೬೦೦೦ ಎಕರೆ ಮಾತ್ರ. ೧೯೭೦-೭೧ನೇ ಇಸವಿಯಲ್ಲಿ ನಮ್ಮ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಇದ್ದಂತಹ ಕಾಲದಲ್ಲಿ ಬೆಂಗಳೂರಿನ ಸುತ್ತ ಡೆವೆಲಪ್‌ಮೆಂಟ್‌ಗಾಗಿ ಸುಮಾರು ೧೩ ಸ್ಕೀಮ್‌ಗಳನ್ನು ತೆಗೆದುಕೊಂಡಿದ್ದರು. ಆದರ ಪ್ರಿಲಿಮಿನರಿ ನೋಟಿಫಿಕೇಷನ್ ಆಗಿದ್ದು ೧೯೭೧ರಲ್ಲಿ. ೧೯೭೧ ರಿಂದ ೧೯೭೫ರ ವರೆಗೂ ಅದು ಆಗುತ್ತಾ ಬಂದಿದೆ. ಒಟ್ಟು ಸುಮಾರು ೧೩ ಸಹಸ್ರ ಎಕರೆ ಭೂಮಿ ಈ ನೋಟಿಫಿಕೇಷನ್‌ಗೆ ಒಳಪಟ್ಟಿದೆ. ೧೩ ಸಹಸ್ರ ಎಕರೆ ಭೂಮಿಯನ್ನು ಅಕ್ವೈರ್ ಮಾಡುವುದಕ್ಕೆ ಇದುವರೆಗೆ ಏನಾಯಿತು ಎಂದರೆ ೧೯೭೧ ರಿಂದ ೧೯೭೫ರ ವರೆಗೆ ಬರೀ ಪ್ರಿಲಿಮಿನರಿ ನೋಟಿಫಿಕೇಷನ್ ಆಯಿತು. ಮೊದಲು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಎನ್ನತಕ್ಕಂಥ ಸಂಸ್ಥೆ ಇತ್ತು. ಇದಾದ ಮೇಲೆ ಈ ಬಿ.ಡಿ.ಎ ಎನ್ನತಕ್ಕಂಥ ಸಂಸ್ಥೆ ಬಂತು. ಈ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಇದ್ದಂತಹ ಕಾಲದಲ್ಲಿ ಆದಂತಹ ಪ್ರಿಲಿಮಿನರಿ ನೋಟಿಫಿಕೇಷನ್ ಅಥವಾ ರೆಗ್ಯುಲರ್ ನೋಟಿಫಿಕೇಷನ್ ಏನಿತ್ತೋ ಅದು ಲೀಗಲ್ ಆಗಿ ಇತ್ತು. ಬ್ಯಾಷ್ ಆದರ ಬಗ್ಗೆ ಬಿ.ಡಿ.ಎಯವರಿಗೆ ಏನು ತಿಳಿವಳಿಕೆ ಬಂತೋ ಗೊತ್ತಿಲ್ಲ, ಅವರು ವಳೆಯ ಎಲ್ಲಾ ನೋಟಿಫಿಕೇಷನ್ಸ್‌ನ್ನು ವಿತ್‌ಡ್ರಾ ಮಾಡಿದರು. ಏತಕ್ಕೆ ಮಾಡಿದರು? ಆ ನೋಟಿಫಿಕೇಷನ್ ಇದ್ದದ್ದು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್ ಆಕ್ಟ್ ಕೆಳಗೆ. ಆದನ್ನೇ ಇವರು ಜಾರಿಗೆ ಕೊಡುವುದಕ್ಕೆ ಆಗುತ್ತಾ ಇರಲಿಲ್ಲವೇ ? ಪುನಃ ಫ್ರೆಷ್ ನೋಟಿಫಿಕೇಷನ್ ಇಷ್ಯೂ ಮಾಡುವುದಕ್ಕಾಗಿ ಹಿಂದೆ ಇದ್ದಂತಹ ಎಲ್ಲಾ ನೋಟಿಫಿಕೇಷನ್‌ಗಳನ್ನು ವಿತ್‌ಡ್ರಾ ಮಾಡಿದರು. ೧೯೭೬ ೭೭ರಲ್ಲಿ ಪುನ ಪ್ರಿಲಿಮಿನರಿ ನೋಟಿಫಿಕೇಷನ್ ಇಷ್ಯೂ ಮಾಡಿದರು. ಆ ಪ್ರಿಲಿಮಿನರಿ ನೋಟಿಫಿಕೇಷನ್ ಆನೇಕ ಸ್ಕೀಮ್‌ಗಳಿಗೆ ಸಂಬಂಧಪಟ್ಟ ಹಾಗೆ ಇದೆ. ಈ ಬಗ್ಗೆ ಎಲ್ಲಾ ನೋಟಿಫಿಕೇಷನ್‌ಗಳು ಇಲ್ಲದೇ ಹೋದರೂ ಕೆಲವು ಗೆಜೆಟ್ ನೋಟಿಫಿಕೇಷನ್‌ಗಳನ್ನು ಇಟ್ಟಿದ್ದಾರೆ.

ಪ್ರಿಲಿಮಿನರಿ ನೋಟಿಫಿಕೇಷನ್ ಫೈನಲ್ ಆಗಿದ್ದು ೧೯೭೮ನೇ ಇಸವಿಯಲ್ಲಿಯೇ. ಅದನ್ನು ಸರ್ಕಾರದವರು ಏನೋ ಮಾಡಬೇಕೆಂದು ಹೊರಟಿದ್ದಾರೆ. ಈಗ ಬಿ.ಡಿ.ಎ ನವರು ೩ ಕಡೆಗಳಲ್ಲಿ ಗುಡಿಸಲುಗಳನ್ನು ಒಡೆಯುವುದಕ್ಕೆ ಹೊರಟಿದ್ದಾರೆ. ಬಿ.ಡಿ.ಎ ನವರು ಹೇಳುವ ಹಾಗೆ ಮನೆಗಳು ರಸ್ತೆಗೆ ಅಡ್ಡ ಬರುತ್ತಿವೆ ಎನ್ನತಕ್ಕಂತಹ ಮಾತು ಸತ್ಯಕ್ಕೆ ದೂರವಾದುದು. ಆದ್ದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಸಲಹೆಯನ್ನು ಕೊಡಬೇಕಾಗಿತ್ತು ಆದರೆ ಅವರು ಈಗ ಇಲ್ಲಿ ಇಲ್ಲ. ಇದಕ್ಕೆ ಸಂಬಂಧಪಟ್ಟ ಮಂತ್ರಿಗಳಿಗೆ ಹೇಳುತ್ತಿದ್ದೇನೆ. ಬಿ.ಡಿ.ಎ. ನವರು ರಸ್ತೆ ಇದೆ ಎಂದು ಹೇಳುತ್ತಿರುವುದು ನ್ಯಾಯ ಬಾಹಿರವಾದುದು. ಇದು ಒಂದು ರೀತಿ ದೊಡ್ಡ ಚರ್ಚೆಗೆ ಬರುತ್ತದೆ. ಚಂದ್ರ ಲೇ ಔಟ್‌ನಲ್ಲಿ ೧೯೫೯-೬೨ನೇ ಇಸವಿಯಲ್ಲಿಯೇ ಅಂದರೆ ನಮಗೆ ಸ್ವಾತಂತ್ರ ಬರುವುದಕ್ಕೆ ಮುಂಚಿತವಾಗಿ ಅಂದಿನ ಅಸಿಸ್ಟೆಂಟ್ ಕಮಿಶನರ್ ಆವರು ಚಂದ್ರಾ ಲೇಔಟಿನ ಕನ್‌ವರ್ ಚಾರ್ಜಸ್ಸ್‌ನ್ನು ಕೊಟ್ಟು ಕನ್‌ವರ್ಟ್ ಮಾಡಿ ಲೇಔಟ್ ಮಾಡಿಕೊಳ್ಳುವುದಕ್ಕೆ ಆರ್ಡರ್ ಕೊಟ್ಟಿರುವುದು ಇದೆ. ಆದ್ದರಿಂದ ನಾನು ಹೇಳುವುದಾದರು ಏನೆಂದರೆ ಈಗ ಮನೆಗಳನ್ನು ಕಟ್ಟಿಕೊಂಡಿರುವ ರಸ್ತೆಯನ್ನು ಬಿಟ್ಟು ಮನೆಗಳನ್ನು ಕಟ್ಟಿಕೆ ಇಳ್ಳದೆ ಇರತಕ್ಕಂತಹ ಜಾಗದಲ್ಲಿ ತಾವು ರಸ್ತೆಯನ್ನು ಮಾಡಿದರೆ ಇದರಿಂದ ಯಾರಿಗೂ ತೊಂದರೆಯಾಗುವುದಿಲ್ಲ. ಅದು ಬಿಟ್ಟು ನೀವು ಮನೆಗಳನ್ನು ಕಟ್ಟಿಕೊಂಡಿರುವ ಜಾಗದಲ್ಲಿ ರಸ್ತೆ ಮಾಡುವುದಕ್ಕೆ ಹೊರಟರೆ ಸಣ್ಣ ಸಣ್ಣ ಮನೆಗಳನ್ನು ಕಟ್ಟಿಕೊಂಡಿರುವವರಿಗೆ ತೊಂದರೆಯಾಗುತ್ತದೆ. ಈಗ ಇರುವ ೨೫ ಅಡಿ ರಸ್ತೆಗೆ ಆ ಕಡೆಯಿಂದ ೫ ಅಡಿ ಈ ಕಡೆಯಿಂದ ೫ ಅಡಿಯನ್ನು ತೆಗೆದುಕೊಂಡು ೩೫ ಅಡಿ ರಸ್ತೆಯನ್ನು ಮಾಡ ಬೇಡ ಎಂದು ಯಾರೂ ಹೇಳುವುದಿಲ್ಲ. ಅಲ್ಲಿ ರಸ್ತೆ ಯನ್ನು ಮಾಡಿದರೆ ಬಿ.ಡಿ.ಎ. ಅಧಿಕಾರಿಯ ಮನೆ ಇರಬಹುದೆಂದು ನಾನು ತಿಳಿದು ಕೊಂಡಿದ್ದೇನೆ. ಮತ್ತು ಹೈಕೋರ್ಟ್‌ನಲ್ಲಿ ಸ್ಟೇ ಆರ್ಡರ್ ತಂದರೂ ಕೂಡ ಬಿ ಡಿ.ಎ. ಅಧಿಕಾರಿಗಳು ಹೋಗಿ ಒಡೆದು ಹಾಕುತ್ತೇವೆ ಎಂದು ಗಲಾಟೆ ಮಾಡುವುದು ಸರಿಯೇ? ಎಲ್ಲಾ ಕಡೆಗಳಲ್ಲಿಯೂ ನೋಟಿಸನ್ನು ಕೊಡುತ್ತಿದ್ದಾರೆ ಏನೆಂದರೆ ಬಿ.ಡಿ.ಎ. ಇಲಾಖೆಯವರು ಬಂದು ನಿನ್ನ ಮನೆಯನ್ನು ಒಡೆದು ಹಾಕುತ್ತೇವೆ ಎಂದು. ಕೆಲವು ಕಡೆ

ದೊಡ್ಡ ದೊಡ್ಡ ಶ್ರೀಮಂತರು ದೊಡ್ಡ ದೊಡ್ಡ ಬಂಗಲೆಗಳನ್ನು ಕಟ್ಟಿಕೊಂಡಿದ್ದಾರೆ ಇವರನ್ನು ಯಾರೂ ಕೇಳುವವರು ಇಲ್ಲ. ಈ ಲೇಔಟ್‌ನಲ್ಲಿ ಸುಮಾರು ೧೩ ಸಾವಿರ ಮನೆಗಳನ್ನು ಕಟ್ಟಿ ಕೊಂಡಿದ್ದಾರೆ. ಆ ಅಂಕಿಅಂಶಗಳನ್ನು ತಮಗೆ ಕೊಟ್ಟರೆ ಅರ್ಥವಾಗುತ್ತದೆ. ಇನ್ನು ೧೩ ಸಾವಿರ ಎಕರೆ ಜಮೀನಿನಲ್ಲಿ ಸುಮಾರು ೬೦ ಸಹಸ್ರ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಮತ್ತು ಇನ್ನೂ ೧ ಲಕ್ಷ ೪೦ ಸಾವಿರ ಖಾಲಿ ನಿವೇಶನಗಳು ಇವೆ. ಇದರಲ್ಲಿ ತಾವು ಯಾವುದನ್ನು ಒಡೆಯುತ್ತೀರಿ. ಯಾವುದನ್ನು ಬಿಡುತ್ತೀರಿ ? ಎಂಬುದು ನಮಗೆ ಒಂದೂ ಅರ್ಥವಾಗುವುದಿಲ್ಲ. ಸುಮಾರು ೧೦ ಸಾವಿರ ಮನೆಗಳನ್ನು ಕಟ್ಟಿಕೊಂಡು ಒಂದೊಂದು ಲೇಔಟನ್ನು ಮಾಡಿಕೊಂಡಿದ್ದಾರೆ. ಇನ್ನೂ ಸುಮಾರು ೩ ಸಾವಿರ ಎಕರೆ ಜಮೀನಿನ ಖಾಲಿ ನಿವೇಶನಗಳು ಇವೆ. ಈ ವಿಷಯವನ್ನು ನಾನು ತಮ್ಮ ಗಮನಕ್ಕೆ ಪತಕ್ಕೆತರುತ್ತಿದ್ದೇನೆ ಎಂದರೆ ಮಾನ್ಯ ಮುಖ್ಯಮಂತ್ರಿಗಳು ಬಿ.ಡಿ.ಎ.ಗೆ ಎನು ಒಂದು ಶಹಬಾಸ್ ಗಿರಿಯನ್ನು ಕೊಡುವುದಕ್ಕೆ ಹೊರಟಿದ್ದಾರೆ ಆದು ಅಷ್ಟು ಸಲೀಸಾಗಿ ಮಾಡುವ ಕೆಲಸವಲ್ಲ. ಅದಕ್ಕೆ ಒಂದು ಹಿನ್ನೆಲೆಯಲ್ಲಿ ಈ ಮಾತನ್ನು ಹೇಳಿದ್ದಾರೆ. ಬಿ.ಡಿ.ಎ. ನವರು ಅನೇಕ ಕಡೆ ನೋಟಿಫಿಕೇಶನ್ ಮಾಡಿದ್ದಾರೆ. ಆಲ್ಲಿ ನಮ್ಮ ಸರ್ಕಾರ ರೀ ಕನ್ಫೆ ಮಾಡಿದ್ದಾರೆ. ಇನ್ನೂ ಅನೇಕ ರೆವಿನ್ಯೂ ಜಮೀನುಗಳನ್ನು ಸಹ ರೀ ಕನ್ಫೆ ಮಾಡಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಸರ್ಕಾರೀ ನೌಕರರ ಸಹಕಾರ ಸಂಘಗಳು ಮತ್ತು ಫ್ಯಾಕ್ಟರಿ ಸಹಕಾರ ಸಂಘಗಳು ಇವರು ರೆವಿನ್ಯೂ ಲ್ಯಾಂಡನ್ನು ರೀ ಕನ್ಫೆ ಮಾಡಿಕೊಡುವುದಕ್ಕೆ ಮತ್ತು ಅವುಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಹಣವನ್ನು ತೆಗೆದುಕೊಂಡಿದ್ದಾರೆ. ಬಿ.ಡಿ.ಎ. ನವರು ೧೯೭೯-೮೦ರಲ್ಲಿ ಒಂದು ರೆಜುಲ್ಯೂಶನ್ ಮಾಡಿ ರೀ ಕನ್ಫೆ ಮಾಡಿಕೊಡುವುದಕ್ಕೆ ಹಣವನ್ನು ಕಟ್ಟಿಸಿ ಕೊಂಡಿರುವುದೂ ಇದೆ. ಇದು ಸರಿಯೇ ಎಂದು ನಾನು ಪ್ರಶ್ನೆ ಕೇಳುತ್ತೇನೆ. ಹೊಸದಾಗಿ ಅಧ್ಯಕ್ಷರಾಗಿ ಬಂದಿರುವವರು ಗೋಣಿ ಆಗಸ ಹೊಸದರಲ್ಲಿ ಎತ್ತೇತ್ತಿ ಒಗೆದ ಹಾಗೆ ಒಗೆಯುತ್ತಿದ್ದಾರೆ. ಆವರು ಮಾಡುತ್ತಿರುವ ಕೆಲಸ ನಿಮ್ಮ ಸರ್ಕಾರಕ್ಕೆ ಗ್ರಹಚಾರವನ್ನು ತರುತ್ತಿದ್ದಾರೆ. ಈ ಅಂಕಿಅಂಶಗಳನ್ನು ನಿಮಗೆ ಕೊಟ್ಟರೆ ನೀವು ೬೦ ಸಾವಿರ ಮನೆಗಳನ್ನು ಹೇಗೆ ಒಡೆದು ಹಾಕುವುದಕ್ಕೆ ಸಾಧ್ಯವಾಗುತ್ತದೆ ? ಕೆಲವು ಕಡೆ ಕೆಲವರು ದೊಡ್ಡ ದೊಡ್ಡ ಬಂಗಲೆಗಳನ್ನು ಕಟ್ಟಿಕೊಂಡಿದ್ದಾರೆ ಆದು ಅನ್ಯಾಯವಲ್ಲವೇ ? ಇಂತಹ ಮನೆಗಳನ್ನು ರಾಜಮಹಲ್ ವಿಲಾಸ್ ಎಕ್ಸ್‌ಟೆನ್‌ಷನ್‌ನಲ್ಲಿ ದೊಡ್ಡ ದೊಡ್ಡ ಶ್ರೀಮಂತರು ದೊಡ್ಡ ದೊಡ್ಡ ಬಂಗಲೆಗಳನ್ನು ಕಟ್ಟಿಕೊಂಡಿದ್ದಾರೆ ಅವರ ಮನೆಗಳನ್ನು ಎತಕ್ಕೆ ಒಡೆಯಬಾರದು ?

೧೧-೫೦ ಎ.ಎಂ.

ಇದಕ್ಕೆ ಕಾರಣವೇನು. ಅವರು ಶ್ರೀಮಂತರು ಎಂದು ಒಡೆಯುವುದಿಲ್ಲವೋ. ಕೆಲವು ಫ್ಯಾಕ್ಟರಿ ಗಳನ್ನು ಕಟ್ಟಿದ್ದಾರೆ ಬಾಣಸವಾಡಿ ಲೇಔಟ್‌ನಲ್ಲಿ, ಮದ್ರಾಸ್ ರೋಡಿನಲ್ಲಿ, ಫ್ಯಾಕ್ಟರಿಗಳನ್ನು ಕಟ್ಟಿದ್ದಾರೆ. ಇದರಲ್ಲಿ ಹೀಗೆ ಹೇಳಿದ್ದಾರೆ. ಬಾಣಸವಾಡಿ, ಮಡಿವಾಳ, ತಾವರೆಕೆರೆ ಸ್ಕೀಂ ಎಂದು ಹೇಳಿದ್ದಾರೆ. ಇದರಲ್ಲಿ ಮಂತ್ರಿಗಳು ಯಾರು ಇದ್ದಾರೆ ಎಂದು ವಿಷಯವನ್ನು ನಾನು ಪೂರ್ತ ಶೋಧನೆ ಮಾಡದೆ ಹೇಳುವುದಕ್ಕೆ ಇಷ್ಟವಿಲ್ಲ, ಅಂಕಿಅಂಶ ಸಿಕ್ಕದೆ ನಾನು ಹೇಳುವುದಕ್ಕೆ ತಯಾರಿಲ್ಲ. ಒಬ್ಬ ಮಂತ್ರಿ ಇದರಲ್ಲಿ ಎರಡು ಕಡೆ ಫ್ಯಾಕ್ಟರಿ ಕಟ್ಟಿಸಿದ್ದಾರೆ. ಯಾವ ಏರಿಯಾವನ್ನು ಅನ್-ಆಥರೈಸ್ಡ್ ಕನ್‌ಸ್ಟ್ರಕ್ಷನ್, ರೆವಿನ್ಯೂ ಸೈಟ್ ಮಾಡಿರುವುದು ಸರಿಯಲ್ಲ ಎಂದು ಹೇಳಿದಿರೋ ಆವೇ ಏರಿಯಾದಲ್ಲಿ ಅಂದರೆ ಕಾಚರಕನಪಳ್ಳಿಯಲ್ಲಿ ಮಾಡಿದ್ದಾರೆ. ಆದರಲ್ಲೂ ೧೩ ಲೇಔಟ್ಸ್‌ಗೆ ಸಂಬಂಧಪಟ್ಟಂತೆ ಫೈನಲ್ ನೋಟಿಫಿಕೇಷನ್. ಪ್ರಿಲಿಮಿನರಿ ನೋಟಿಫಿಕೇಷನ್ ಮಾಡಿದ್ದಾರೆ. ಬಾಣಸವಾಡಿ, ಕಾಚರಕನ ಹಳ್ಳಿ ಏರಿಯಾದಲ್ಲಿ ಸುಮಾರು ೧೫೦೦ ರಿಂದ ೨೦೦೦ ಎಕರೆ ಹತ್ತಿರ ನೋಟಿಫೈ ಆಗಿದೆ. ನನಗೆ ಗೊತ್ತಿರುವ ಹಾಗೆ, ಈ ಏರಿಯಾದಲ್ಲಿ ಒಬ್ಬ ಮಿನಿಸ್ಟರ್ ಒಂದಲ್ಲ, ಎರಡು ಎಕರೆ, ಮೂರು ಎಕರೆ ಪ್ರದೇಶವನ್ನು ಇಂಡಸ್ಟ್ರಿಯಲ್ ಎಸ್ಟೇಟ್ ಎಂದು ಮಾಡಿಕೊಂಡು ಕಾಚರಕನ ಪಳ್ಳಿ ಪಂಚಾಯಿತಿಯವರನ್ನು ಲೈಸೆನ್ಸ್ ಕೇಳುವುದಕ್ಕೆ ಒತ್ತಾಯಪಡಿಸಿ, ಮೂರು ಸಾರಿ ಆವರು ರೆಫ್ಯೂಸ್ ಮಾಡಿ ನಾಲ್ಕನೇ ಸಾರಿ ಒತ್ತಾಯದ ಮೇಲೆ ತೆಗೆದುಕೊಂಡಿದ್ದಾರೆ. ಆದು ಮಂತ್ರಿಗಳ ಹೆಸರಿನಲ್ಲಿದೆಯೋ, ಅವರ ಮಕ್ಕಳ ಹೆಸರಿನಲ್ಲಿದೆಯೋ, ಅವರ ನೆಂಟರ ಹೆಸರಿನಲ್ಲಿದೆಯೋ, ಅವರ ಸ್ನೇಹಿತರ ಹೆಸರಿನಲ್ಲಿದೆಯೋ ಗೊತ್ತಿಲ್ಲ, ಗೊತ್ತಾದ ಹೊರತು ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ ; ಸಧ್ಯದಲ್ಲೇ ಗೊತ್ತಾಗುತ್ತದೆ. ಆದು ಬಂದಾಗ ತಿಳಿಸುತ್ತೇನೆ. ಸದ್ಯಕ್ಕೆ ಗೊತ್ತಿರುವುದು ಇಷ್ಟೆ. ಯಾವ ಏರಿಯಾವನ್ನು ಅನ್‌ಆಥರೈಸ್ಡ್ ಕನ್‌ಸ್ಟ್ರಕ್ಷನ್ ಎಂದು ಹೇಳುತ್ತೀರಿ. ಆದೇ ಏರಿಯಾದಲ್ಲಿ ಮಂತ್ರಿಗಳ ಪ್ರಭಾವ. ಹಣವಂತರ ಪ್ರಭಾವ ಇದ್ದರೆ ಅನ್‌ಆಥರೈಸ್ಡ್ ಅಲ್ಲವೇ. ಇದೇ ಚಂದ್ರಾ ಲೇಔಟ್‌ನಲ್ಲಿ ಮಾನ್ಯ ಮುಜರಾಯ್ ಮಂತ್ರಿಗಳು ಹೋಗಿ ನಿವ

ದೇವಸ್ಥಾನಕ್ಕೆ ೫ ಸಾವಿರ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿ ಬಂದಿದ್ದಾರೆ. ಅಲ್ಲಿ ಹನುಮಂತರಾಯನದೋ, ಗಣಪತಿದೋ ದೇವಸ್ಥಾನವಿದೆ. ಏಕೆ ಕುತೂಹಲದಿಂದ ನೋಡುತ್ತೀರಿ. ಯಾವುದರಲ್ಲಿ ೮೯ ಗುಡಿಸಲುಗಳನ್ನು ತೆಗೆದರೋ ಅಲ್ಲಿಗೆ ಮುಜರಾಯ್ ಮಂತ್ರಿಗಳು ಹೋಗಿ ದೇವಸ್ಥಾನಕ್ಕೆ ೫೦೦೦ ರೂಪಾಯಿಗಳನ್ನು ಕೊಡುತ್ತೇನೆ ಎಂದು ಹೇಳಿದ್ದಾರೆ, ಇನ್ನು ದುಡ್ಡು ಹೋಗಿಲ್ಲ. ಅಲ್ಲಿದ್ದ ಗುಡಿಸಲುಗಳೆಲ್ಲಾ ಹೋಯಿತು. ಹೀಗೆ ಲೇಔಟ್ಸ್ ಡೆವಲಪ್‌ಮೆಂಟ್ ಮಾಡಬೇಕು ಎಂದರೆ ಹೇಳುತ್ತೀರಿ, ಇದರಲ್ಲಿ ಅನೇಕ ಪ್ಲೇರಿವಿನ್ಯೂ ಸೈಟ್ಸ್‌ನೆಲ್ಲಾ ರೀಕನ್ವೆ ಮಾಡಿದ್ದೀರಿ. ರೀಕನ್ವೆ ಮಾಡಿರುವುದು ಯಾವು–ಯಾವುದು ಅಂದರೆ ನನಗೆ ಗೊತ್ತಾಗಿರತಕ್ಕಂಥಾದ್ದು ರಾಘವೇಂದ್ರನಗರ, ಮುನೇಶ್ವರ ನಗರ, ಶ್ರೀನಗರ ಅಗ್ರಹಾರ, ವೈರೆ. ಇಲ್ಲಿ ತಾವು ಬಿ.ಡಿ.ಎ.ಯಿಂದ ರೀಕನ್ವೆ ಮಾಡಿದ್ದೀರಿ. ಅದೇ ರೀತಿ ರಾಜಾಜಿನಗರ ೩ನೇ ಸ್ಟೇಜ್, ವೆಸ್ಟ್ ಆಫ್ ಕಾರ್ಡ್‌ರೋಡ್, ಪ್ರಕಾಶ ನಗರ, ರಾಜಾಜಿನಗರ ಸೆಕೆಂಡ್ ಸ್ಟೇಜ್, ಗೋಕುಲ ಲೇಔಟ್—ಇವನ್ನೆಲ್ಲಾ ರೀಕನ್ವೆ ಮಾಡಿದ್ದೇವೆ. ನೀವು ಈಗ ಮಾಡಬೇಕಾದರೆ ಒಂದು ಕಡೆ ಬಿ.ಡಿ.ಎ. ಆಫಿಸರ್ಸ್ ನೋ ಅಬ್ಜೆಕ್ಷನ್ ಸರ್ಟಿಫಿಕೇಟ್ ಕೊಟ್ಟುಬಿಟ್ಟಿದ್ದಾರೆ. ಅದರ ಒಂದೇ ಒಂದು ಕಾಪಿ ನನಗೆ ಸಿಕ್ಕಿತು. ವಿಲೇಜ್ ಪಂಚಾಯಿತಿಯಿಂದ ಲೈಸೆನ್ಸ್ ತೆಗೆದುಕೊಂಡು ಮನೆ ಕಟ್ಟಿದ್ದಾರೆ. ಡೆಪ್ಯುಟಿ ಕಮಿಷನರ್ ಕನ್‌ವರ್ಷನ್ ಮಾಡುವುದಕ್ಕೆ ಪರ್ಮಿಷನ್ ಕೊಟ್ಟಿದ್ದಾರೆ. ವಿಲೇಜ್ ಪಂಚಾಯಿತಿಯವರು ಲೈಸನ್ಸ್ ಕೊಟ್ಟಿದ್ದಾರೆ. ವಿಲೇಜ್ ಪಂಚಾಯಿತಿಯವರು ಲೈಸನ್ಸ್ ಕೊಟ್ಟು ಹೌಸ್ ಟ್ಯಾಕ್ಸ್ ವಸೂಲು ಮಾಡುತ್ತಿದ್ದಾರೆ. ಇನ್ನೊಂದು ಕಡೆ ನೀರು, ದೀಪ ಕೊಡಬೇಕಾದರೆ ಬಿ.ಡಿ.ಎ. ಆಫೀಸರ್ ನೋ ಅಬ್ಜೆಕ್ಷನ್ ಸರ್ಟಿಫಿಕೇಟ್ ಕೊಡಬೇಕು ಎಂದು ಕಾನೂನು ಇದೆ. ಈಗ, ಲೈಟು, ನೀರು ಹಾಕಿಕೊಳ್ಳುವುದಕ್ಕೆ ಬಿ.ಡಿ.ಎ. ಆಫೀಸರ್ ನೋ ಅಬ್ಜೆಕ್ಷನ್ ಸರ್ಟಿಫಿಕೇಟ್ ಕೊಟ್ಟುಬಿಟ್ಟಿದ್ದಾರೆ. ಇಂತಹವು ಸಹಸ್ರಾರು ಕೇಸುಗಳಿವೆ. ಇದು ಒಂದನ್ನೂ ನೋಡದೆ, ಸಮ್ಮನೆ ಹೋಗಿ, ನಾನು ಬಿ.ಡಿ.ಎ.ಗೆ ಹೊಸದಾಗಿ ಬಂದುಬಿಟ್ಟಿದ್ದೇನೆ, ಎಲ್ಲವನ್ನೂ ಹೊಡೆದು ಹಾಕುತ್ತೇನೆ ಅಂದರೆ ಹೇಗೆ. ತೆಗೆದುಬಿಡುತ್ತೇವೆ ಅಂದರೆ ನಾನು ಒಂದು ಮಾತು ಹೇಳುತ್ತೇನೆ. ನೀವು ಹೊಡೆಸುವುದು ಇದ್ದರೆ ನನ್ನದು ಒಂದು ಪ್ರಾರ್ಥನೆ. ನಾನು ಸ್ಥಳ ತೋರಿಸುತ್ತೇನೆ ಅಲ್ಲಿ ಶುರುಮಾಡಿ, ನಿಮಗೆ ಧೈರ್ಯವಿದ್ದರೆ ಅಲ್ಲಿ ಮಾಡಿ. ೬೦ ಸಾವಿರ ಮನೆಗಳನ್ನಾದರೂ ಹೊಡೆದು ಕೊಳ್ಳಿ, ಲಕ್ಷ ಮನೆಗಳನ್ನಾದರೂ ಹೊಡೆದುಕೊಳ್ಳಿ ಯಾವ ಮನೆಗಳನ್ನು ಶ್ರೀಮಂತರು ಕಟ್ಟಿದ್ದಾರೆ ಆ ಮನೆಗಳು ಇವೆಯಲ್ಲಾ ಅದನ್ನು ಹೋಗಿ ಒಡೆಸಲಿ. ಇಲ್ಲ ಅಂದರೆ, ಗಂಬ್ಡಿಯ ಮೇಲೆ ಬ್ರಹ್ಮಾಸ್ತ್ರ ಬಿಟ್ಟಹಾಗೆ ಆಗುತ್ತದೆ. ಲೇಬರರ್ಸ್ ಕಷ್ಟಪಟ್ಟು ದುಡ್ಡು ಕಾಸು ಸಂಪಾದನೆ ಮಾಡಿಕೊಂಡಿರುವ ಜನ ಇದ್ದಾರೆ, ಫ್ಯಾಕ್ಟರಿಯಲ್ಲಿ ಕೆಲಸ ಮಾಡುವ ಜನ ಅಧಿಕಾರದಲ್ಲಿರುವ ನೌಕರಿಯಲ್ಲಿದ್ದಾರೆ. ಪ್ರೈವೇಟ್ ಅಥವಾ ಸರ್ಕಾರದಲ್ಲಿ ಕೆಲಸ ಮಾಡತಕ್ಕವರು, ೩ನೇ ದರ್ಜೆ, ೪ನೇ ದರ್ಜೆ ನೌಕರರು, ಮಿಡ್ಲ್ ಕ್ಲಾಸ್ ಪೀಪಲ್ ೯೫ ಭಾಗ ಅಂತಹ ಜನರೇ ಇರುವುದು. ಅದನ್ನೆಲ್ಲಾ ಕೊಳಚೆ ಪ್ರದೇಶ ಎಂದು ತಿಳಿದುಕೊಂಡು ಬಿಟ್ಟೀರ. ಕೊಳಚೆ ಪ್ರದೇಶ ಒಂದು ಕಡೆ ಇದೆ. ಇವೆರಡನ್ನೂ ಮಿಕ್ಸ್‌ಅಪ್ ಮಾಡಿಕೊಳ್ಳಬೇಡಿ. ಡೋಂಟ್ ಕನ್‌ಫ್ಯೂಸ್ ದಿ ಇಷ್ಯೂ. ಅದೇ ಬೇರೆ. ನಾನು ಮಾತನಾಡುತ್ತಾ ಇರುವುದೇ ಬೇರೆ. ಎಲ್ಲಿ ನೋಟಿಫೈ ಆಗಿ, ಸ್ಕೀಂ ತಯಾರಾಗಿ, ಪೊಸಿಷನ್ ತೆಗೆದುಕೊಂಡು, ಲೇಔಟ್ ಮಾಡಿ ಮನೆ ಕಟ್ಟಿಸಬೇಕಾಗಿತ್ತೋ ಅಲ್ಲಿ ಆಗಲೇ ಮನೆ ಬಂದುಬಿಟ್ಟಿದೆ. ೩೦ ವರ್ಷಗಳ ಹಿಂದೆ ಮನೆ ಕಟ್ಟಿದವರು ಇದ್ದಾರೆ, ೧೦ ವರ್ಷಗಳಿಂದ ಕಟ್ಟಿದವರು ಇದ್ದಾರೆ. ೨ ವರ್ಷಗಳಿಂದ ಕಟ್ಟಿದ ಮನೆ ಇದೆ. ಆಗ ೧೮ ಸಾವಿರ ಮನೆಗಳು ಬಂದಿದ್ದರೆ ಈಗ ೨ ವರ್ಷಗಳಿಂದ ೪೦ ಸಾವಿರ ಮನೆಗಳು ಬಂದಿವೆ. ಇದು ಹೇಗೆ ಬಂತು. ತಾವು ಬಂದ ಕೂಡಲೇ ಡೆಪ್ಯುಟಿ ಕಮಿಷನರಿಗೆ ಇದ್ದಂಥ ಅಧಿಕಾರವನ್ನು ತೆಗೆದುಕೊಂಡು ತಹಶೀಲ್ದಾರರಿಗೆ ದುಡ್ಡು ಕಟ್ಟಿದ್ದರೆ ಅವನು ಅಗ್ರಿಕಲ್ಚರಲ್ ಲ್ಯಾಂಡನ್ನು ಕನ್‌ವರ್ಟ್ ಆಯಿತು ಎಂದು ತಿಳಿದುಕೊಂಡು ಏನು ಬೇಕಾದರೂ ಮಾಡಿಕೊಳ್ಳಬಹುದು ಎಂದು ಆರ್ಡಿನೆನ್ಸ್ ತಂದಿದ್ದು ಪೂರ್ಣ ಆ ಮಿನಿಸ್ಟರಿಗೆ ಜ್ಞಾಪಕವಿದೆಯೋ. ಆಮೇಲೆ ಇದು ಸರಿಯಲ್ಲ ಎಂದು ನಾವು ಹೇಳಿದೆವು. ಆಮೇಲೆ ೬ ತಿಂಗಳ ಮೇಲೆ ಆದನ್ನು ಕೈಬಿಟ್ಟಿರಿ ಎನ್ನುವುದು ಜ್ಞಾಪಕವಿದೆ.

ಅಧ್ಯಕ್ಷರು.—ಕಾಲಿಂಗ್ ಅಟೆನ್‌ಷನ್ ಟೈಂ ಬಹಳ ಲಿಮಿಟ್ ಆಗಿದೆ.

ಶ್ರೀ ಡಿ. ದೇವರಾಜ ಅರಸ್.—ಕಾಲಿಂಗ್ ಅಟೆನ್‌ಷನ್‌ಗೆ ಟೈಂ ಲಿಮಿಟ್ ಇದೆ, ಆದರೆ ಈ ಸಬ್ಜಕ್ಟ್ ಇದೆಯೆಲ್ಲಾ ಇದು ಸೊ ಅನ್ ಲಿಮಿಟೆಡ್. ಬಹಳ ಬ್ರೀಫಾಗಿ ಹೇಳುತ್ತಿದ್ದೇನೆ. ಇಲ್ಲದೇ ಹೋದರೆ ಹೇಗೆ ಇಬರ ಮನಸ್ಸಿಗೆ ಹೊಕ್ಕುವ ಹಾಗೆ ಮಾಡುವುದು. ಬಿ.ಡಿ.ಎ. ಛೇರ್ಮನ್ನರು ನಮಗೆ ಗೊತ್ತಿಲ್ಲದೇ

ಇರುವಪರೇನಲ್ಲ, ಅವರು ಇವರಿಗಿಂತ ಮೊದಲೇ ನನಗೆ ಗೊತ್ತಿತ್ತು, ಅಮೇಲೆ ಇವರಿಗೆಲ್ಲಾ ಗೊತ್ತಾಗಿದೆ ಅವರು ಒಂದು ಸಾರಿ ಹೀಗೆ ಅಂದುಬಿಟ್ಟರೆ ಏನು ಹೇಳಿದರೂ ಕೇಳುವುದಕ್ಕೆ ಇವರು ತಯಾರಾಗಿ ಬಿಡುತ್ತಾರೆ. ಆದಕ್ಕೋಸ್ಕರವಾಗಿ ಇದನ್ನೆಲ್ಲಾ ಇವರ ಗಮನಕ್ಕೆ ತರುತ್ತಾ ಇರುವುದು, ಅವರಿಗೆ ಆಷ್ಟೊಂದು ಮಂತ್ರ ಗೊತ್ತಿದೆ. ಹೀಗೇ ಆನ್ನುತ್ತಾ ಇದ್ದರೆ ಯಾರು ಯಾರಿಗೆ ಏನೇನು ಮಾಡಬೇಕ್ಕ ಎನ್ನುವುದು ಅವರಿಗೆ ಚೆನ್ನಾಗಿ ಗೊತ್ತು. ಅವರು ಏನಾದರೂ ಮಾಡಿಕೊಂಡು ಹೋಗಲಿ, ನನಗೆ ಬೇಕಾಗಿಲ್ಲ. ಇದರಲ್ಲಿ ನಿಮ್ಮನ್ನು ಬುದ್ಧಿಯಿಲ್ಲದ ಹಾಗೆ ಮಾಡಿಬಿಟ್ಟಾರು. ಸುಮ್ಮನೆ ತೆಗೆದುಕೊಂಡು ಹೋಗಿ ಹಳ್ಳಕ್ಕೆ ಹಾಕುತ್ತಾರೆ. ೬೦ ಸಾವಿರ ಮನೆಗಳು ಅಂದರೆ ತಮಾಷೆ ಏನಲ್ಲ, ೪೦ ಸಾವಿರ ಮನೆಗಳು ಹೊರಗಡೆ ಇವೆ. ಸುಮಾರು ಒಂದು ಲಕ್ಷ ಮನೆಗಳ ಮೇಲೆ ಕಟ್ಟಿದ್ದಾರೆ. ೧೫ ಸಾವಿರ ಎಕರೆಗೆ ಸಂಬಂಧಪಟ್ಟ ವಿಚಾರ. ತಾವು ಇದರ ಬಗ್ಗೆ ಹೇಳಿದ್ದೀರಿ. ಆಫೀಸರ್ಸ್‌ಗೆ ಗೊತ್ತಿದೆ. *'Suppressio veri and suggestio falsi'* ಆಫೀಸರ್ಸ್‌ಗೆ ಯಾವುದನ್ನು ಹೇಳಬೇಕು, ಯಾವುದನ್ನು ಮುಚ್ಚಿಡಬೇಕು ಎನ್ನುತಕ್ಕಂಥ ಬುದ್ಧಿ ಇದೆ. ಆ ವರದಿಯನ್ನು ತೆಗೆದುಕೊಂಡು ಬಂದು ನಿಮ್ಮ ಕೈಯಲ್ಲಿ ಓದಿಸುತ್ತಾರೆ. ಅದನ್ನು ಪೂರ್ತಿ ಮಾಡುವ ಚೈತನ್ಯ ತಮಗೆ ಬಿಟ್ಟಿದ್ದು. ಇದನ್ನು ದಯವಿಟ್ಟು ಬಿ.ಡಿ.ಎ.ಗೆ ಬಿಡಬೇಡಿ. ಇದರಲ್ಲಿ ಅನೇಕ ವಿಷಯಗಳು ಅಡಕವಾಗಿವೆ. ಬಿ.ಡಿ.ಎ. ಅಧಿಕಾರಿಗಳೇ ಸೇರಿ ಕಟ್ಟಿಸಿರತಕ್ಕಂಥಾದ್ದು ಇದು. ನಮ್ಮ ಲೇಜಿಸ್ಲೇಚರ್ಸ್ ಎಲ್ಲಾ ಬಂದು ಶಹಭಾಸ್‌ಗಿರಿ ಕೊಟ್ಟು ಬಿಟ್ಟರು ಎಂದು ಹೇಳಿದರಂ. ಶಾಪ, ಅವರು ಏನು ಶಹಭಾಸ್‌ಗಿರಿ ಕೊಟ್ಟಿದ್ದು ಅಂದರೆ, ಯಾವುದೋ ಒಂದು ಲೇ ಔಟ್‌ನಲ್ಲಿ ರೀಕಸ್ಟ್ರಿ ಮಾಡಿರಲಿಲ್ಲ, ವಾಟರ್, ಲೈಟೂ ಕೊಟ್ಟಿರಲಿಲ್ಲ. ರೋಡೂ ಹಾಕಿರಲಿಲ್ಲ, ರೋಡು ಎಲ್ಲಾ ಹಾಕಿಸಿಕೊಂಡಿ ಎಂದು ನಮ್ಮ ಲೆಜಿಸ್ಲೇಚರ್ಸ್ ಕೇಳಿದ್ದಾರೆ. ಅವರು ಹಾಕಿಸಿಕೊಟ್ಟರು. ಆದ್ದರಿಂದ ಇವರು ನಮ್ಮ ಸರ್ಕಾರ ಒಳ್ಳೆಯದು ಮಾಡಿದೆ ಎಂದು ಹೇಳಿದ್ದಾರೆ.

ಅವರು ಏದುರು ತಿಳಿದುಕೊಂಡು ಬಿಟ್ಟರು, ಆದರೆ ಅವರು ಏನು ಹೇಳಿದ್ದಾರೆ ಎಂದರೆ ಎಲ್ಲಿ ನೀವು ಲೇ ಔಟ್ ಮಾಡುವಾಗ ರಸ್ತೆಗಳು ಇಲ್ಲದಿದ್ದರೆ, ರಸ್ತೆಗಳನ್ನು ಮಾಡುವುದಕ್ಕೆ ಆಡ್ಡ ಬಂದರೆ ಅಂಥಾ ಮನೆಗಳನ್ನು, ಗುಡಿಸಲುಗಳನ್ನು ಕೆಡವಿ ಹಾಕಿ ಬೇರೆ ಕಡೆ ಜಾಗ ಕೊಟ್ಟು ಒಡೆಯಿರಿ ಎಂದು ಹೇಳಿರುವುದೇನೋ ನಿಜ. ಪಾಪ ಅವರೇನೋ ಇರುವ ಮನೆಗಳನ್ನೆಲ್ಲಾ ಒಡೆದು ಹಾಕಿ ಎಂದು ಹೇಳಿಲ್ಲ, ನಾನು ಕೇಳಿದಾಗ ಇವನ್ನು ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಆದುದರಿಂದ ಇವತ್ತು ಅವರು ಒಡೆಯುವುದಕ್ಕೆ ಒಪ್ಪಿಬಿಟ್ಟಿದ್ದಾರೆ ಹಾಗೆಂದು ತಿಳಿದು ಹಾಗೆ ಮಾಡುವುದಕ್ಕೆ ಹೋಗಬೇಡಿ. ಈ ಒಂದು ಸಮಸ್ಯೆ ಏನಿದೆ ಅದನ್ನು ನಾನು ಹೇಳುತ್ತೇನೆ ತಮಗೆ ನನ್ನ ಸಲಹೆ ಇಷ್ಟವಾದರೆ ಕೇಳಿ ಇಲ್ಲದೇ ಹೋದರೆ ಬಿಡಿ. ನನ್ನ ಸಲಹೆ ಏನೆಂದರೆ ನಿಮ್ಮ ಶಾಸಕರ ಒಂದು ಸಲಹಾ ಸಮಿತಿ ಮಾಡಿ, ಆದನ್ನು ಬಿಟ್ಟು ಬಿ.ಡಿ.ಎ.ನವರು ಸುಮ್ಮನೇ ಮನೆಗಳನ್ನು ಒಡೆಯುವುದಕ್ಕೆ ಬಿಟ್ಟರೆ, ನಾಳೆ ನೀವು ಸಿಗಪಾಕಿಕೊಳ್ಳಬೇಕಾಗುತ್ತದೆ ಏತಕ್ಕೆಂದರೆ ಕಂಟೆಪ್ಟ್ ಆಫ್ ಕೋರ್ಟ್‌ಆಗಿ ಬಿ.ಡಿ.ಎ ಅಧ್ಯಕ್ಷರನ್ನು ಕೋರ್ಟಿಗೆ ಎಳೆಯಬೇಕಾಗುತ್ತದೆ. ಆ ಮೇಲೆ ನೀವು ಈ ಎಲ್ಲಾ ವ್ಯವಹಾರಗಳನ್ನೂ ತಲೆಮೇಲೆ ಕೆಡವಿಕೊಳ್ಳುತ್ತೀರಿ. ನೀವು ಅವರನ್ನೇ ನಂಬಿ ಕೂಡುವುದಾದರೆ ಬಹಳ ಅನಾಹುತಕ್ಕೆ ಒಳಗಾಗುತ್ತೀರಿ. ಇವತ್ತು ನೀವು ಯಾವುದೇ ಅಧಿಕಾರಿಯನ್ನು ಅಲ್ಲಿಗೆ ಹಾಕಿ ಅವರು ಅಲ್ಲಿಗೆ ಹೋಗಿ ಆಡ್ಜಸ್ಟ್ ಮಾಡಿ ಕೊಂಡು ಸರಿಯಾಗಿದೆಂದು ಹೇಳಿ ಬಿಡುತ್ತಾನೆ ಏತಕ್ಕೆಂದರೆ ಅವರೆಲ್ಲರೂ ಅದರಲ್ಲಿ ಭಾಗಿಯಾಗಿ ಬಿಟ್ಟಿದ್ದಾರೆ, ಅವರಲ್ಲಿ ದುಡ್ಡು ಇನ್ನೇನೇ ಇರುವಷ್ಟೇ ಪ್ರಾಪ್ತಿ. ಎಲ್ಲರೂ ಒಂದೊಂದು ಭಾಗ ಹಂಚಿಕೊಂಡು ತಿಂದು ತೇಗಿ ಬಿಟ್ಟಿದ್ದಾರೆ. ನೀವು ಇವತ್ತು ಯಾರನ್ನಾದರೂ ಮನೆಗಳನ್ನು ಕೆಡವಿ ಅಂತ ಕಳುಹಿಸಿದರೆ ಯಾರೂ ಅಲ್ಲಿಗೆ ಹೋಗುವುದಿಲ್ಲ, ಏತಕ್ಕೆಂದರೆ ಹಿಂದೆ ಇದ್ದವರು ಅಲ್ಲಿಗೆ ಇಲ್ಲಿಗೋ ಎಲ್ಲಿಲ್ಲಿಗೋ ಟ್ರಾನ್ಸ್‌ಫರ್ ಆಗಿ ಹೋಗಿ ಬಿಟ್ಟಿದ್ದಾರೆ. ಇನ್ನು ಯಾರೋ ಹೊಸಬರನ್ನು ಕಳುಹಿಸಿ ಒಡೆಸುತ್ತೇವೆಂದು ಕಳಹಿಸಿದರೆ ಅವನೂ ಸಹ ಅಲ್ಲಿ ಏನಾದರೂ ಸ್ವಲ್ಪ ಕೊಟ್ಟರೆ ಆದು ಆಗುವುದಿಲ್ಲವೆಂದು ಹೇಳಿದರೂ ಹೇಳಬಹುದು. ಸ್ವಾಮಿ, ಈ ಕಳೆದ ೨ ವರ್ಷದಲ್ಲಿ ರಿಜಿಸ್ಟ್ರೇಷನ್‌ಗೋಸ್ಕರವಾಗಿ ಹಣವನ್ನು ಕಟ್ಟಿದ್ದಾರೆ ಏನು ವ ಲೆಕ್ಕವನ್ನು ತರಿಸಿಕೊಡಿ. ಈ ಸ್ಟ್ಯಾಂಪ್ ಡ್ಯೂಟಿಯಿಂದ ಎಷ್ಟು ಕೋಟಿ ಹಣವನ್ನು ಜನ ಕಟ್ಟಿದ್ದಾರೆಂಬುದನ್ನು ನೋಡಿ ತಮಗೆ ಗೊತ್ತಾಗುತ್ತದೆ. ೨ ವರ್ಷದಿಂದ ಅಲ್ಲದಿದ್ದರೆ ಅದರ ಹಿಂದಿನಿಂದಲೂ ಬೇಕಾದರೆ ಲೆಕ್ಕ ತರಿಸಿ ಕೊಡಿ ಎಷ್ಟು ಕೋಟಿ ಎರ್ನಿಂಗ್ಸ್ ಆಗಿದೆ ಎಂಬುದು ತಮಗೆ ಗೊತ್ತಾಗುತ್ತದೆ. ೧ ಲಕ್ಷ ಮನೆಗೆ ಸುಮಾರು ಎಷ್ಟು ಕೋಟಿ ಹಣ ಕಟ್ಟಿದ ಮೇಲೆ ನೀವು ಈಗ ಒಡೆದು ಹಾಕುತ್ತೀರಾ ಒಡೆದು ಹಾಕಿ ಯಾರಿಗೆ ಪುನ:

ಆ ಜಾಗವನ್ನು ಕೊಡುತ್ತೀರಾ ಅಧ್ಯಕ್ಷರೇ ಈಗ ನನಗೂಂದಾ ಪ್ರಶ್ನೆ ಉದ್ಭವವಾಗಿದೆ. ಅಲ್ಲಿ ಅವನಿಗೆ ಇರುವುದೊಂದೇ ಮನೆ. ಹೆಚ್ಚಿಗೆ ಇದ್ದರೆ ಅದನ್ನು ಅವನಿಂದ ಕಿತ್ತುಕೊಂಡು ಬೇರೆಯವರಿಗೆ ಕೊಟ್ಟರೆ ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ ಆದರೆ ಇರುವ ಒಂದೇ ಸೈಟ್‌ನ್ನು ಅವರಿಂದ ಕಿತ್ತುಕೊಂಡು ಇನ್ನು ಯಾರಿಗೆ ಕೊಡುತ್ತಾರೆ? ಆದುದರಿಂದ ಅವರ ಸೈಟ್‌ಗಳನ್ನು ಏತಕ್ಕೆ ರೆಗ್ಯುಲರೈಜ್ ಮಾಡಬಾರದು ಹಿಂದೆಲ್ಲಾ ರೆಗ್ಯುಲರೈಜ್ ಮಾಡಿಕೊಟ್ಟಿಲ್ಲವೇ ಆದುದರಿಂದ ರೆಗ್ಯುಲರೈಜ್ ಮಾಡುವುದಕ್ಕೆ ಬರುವುದನ್ನು ಒಪ್ಪಿಕೊಳ್ಳಿ ಏಲ್ಲೋ ಅಡಚಣೆಯಾದರೆ ಮತ್ತೆ ಇನ್ನು ಯಾವುದೇ ಕಾರಣಾಂದರೆ ಅದನ್ನು ಯಾವ ರೀತಿಯಲ್ಲಿ ಬಗೆಹರಿಸಬೇಕು ಎನ್ನುವ ಬಗ್ಗೆ ಯೋಚನೆ ಮಾಡೋಣ. ಅದು ಎಲ್ಲಾ ಬಿಟ್ಟು ಸುಮ್ಮನೇ ಎಲ್ಲರಿಗೂ ನೋಟೀಸ್ ಕೊಡುವುದು ಮತ್ತೆ ಯಾರಿಗೆ ಬೇಕೋ ಅವರನ್ನು ಬಿಡುವುದು ಸರಿಯಲ್ಲ. ಮತ್ತೆ ಅಲ್ಲಿ ಇನ್ನೊಂದು ಕಾರುವಾಗಿದೆ ಏನೆಂದರೆ ಕೆಲವು ಪ್ರಿಜೆಂಟ್ಸ್ ಹುಟ್ಟು ಕೊಂಡಿದ್ದಾರೆ ನಮಗೆ ನೀವು ಇಷ್ಟು ದುಡ್ಡು ಕೊಟ್ಟರೆ ನಾವು ಎಲ್ಲಾ ಸರಿ ಮಾಡಿಕೊಡುತ್ತೇವೆಂದು ಅದೂ ಕೂಡ ನಡೆಯುತ್ತಿದೆ. ಆದುದರಿಂದ ದಯಮಾಡಿ ಇದನ್ನು ಸ್ವಲ್ಪ ಮಟ್ಟಿಗೆ ತಡೆಹಿಡಿದು ಈ ವಿಷಯಗಳನ್ನೆಲ್ಲಾ ಕೂಲಂಕುಷವಾಗಿ ನೋಡಿ. ಮತ್ತೆ ಈ ೧೫ ಲೇ ಔಟ್‌ಗಳಲ್ಲಿ ೬ ಸಾವಿರ ಎಕರೆ ಏನಿದೆ ಅದರಲ್ಲಿ ಅಲ್ಲಲ್ಲಿ ಮಾತ್ರ ಏತಕ್ಕೆ ನೋಟೀಸ್ ಕೊಡುತ್ತಿದ್ದೀರಿ, ಇದರ ಬಗ್ಗೆ ನಾವು ಸ್ವಲ್ಪ ಯೋಚನೆ ಮಾಡಬೇಕಾಗಿದೆ. ನೀವು ನೋಟೀಸ್ ಕೊಡುವ ಹಾಗಿದ್ದರೆ ೬೦ ಸಾವಿರ ಎಕರೆಯಲ್ಲಿರತಕ್ಕ ಮನೆಯವರೆಲ್ಲರಿಗೂ ಕೂಡಿ ನೋಡೋಣ. ಅದನ್ನು ಬಿಟ್ಟು ಬಿಟ್ಟು ಅಲ್ಲೊಂದು ಇಲ್ಲೊಂದು ಏತಕ್ಕೆ ನೋಟೀಸ್‌ನ್ನು ಕೊಡಿಸುತ್ತಿದ್ದೀರಿ? ಕೊನೆಯ ಪಕ್ಷ ೬ ಸಾವಿರ ಎಕರೆಯಲ್ಲಿ ಎಷ್ಟು ಮನೆಗಳು ಇದ್ದಾವೆ ಅವರಿಗೆಲ್ಲರಿಗೂ ಕೊಡಿಸಿದ್ದೀರಾ ಒಂದೇ ಸಾರಿ ಕೊಡುವ ಹಾಗಿದ್ದರೆ ಕೊಡಿ ಆಗ ಏನಾಗುತ್ತದೆಯೋ ಎಂಬುದನ್ನು ನೋಡೋಣ. ಆದುದರಿಂದ ದಯಮಾಡಿ ಸರ್ಕಾರ ಇದರ ಕಡೆಗೆ ಹೆಚ್ಚಿನ ಲಕ್ಷ್ಯ ಕೊಡಬೇಕೆಂದು ಬಹಳ ಕಳಕಳಿಯಿಂದ ಹೇಳುತ್ತಿದ್ದೇನೆ ಇಲ್ಲದೇ ಹೋದರೆ ಇದರಿಂದ ಅನರ್ಥವಾಗಿ ವಿಪರೀತವಾಗುತ್ತದೆ. ಆದುದರಿಂದ ಇವತ್ತು ನೀವು ಇದನ್ನು ಮಾನವೀಯತೆಯ ದೃಷ್ಟಿಯಿಂದ ನೋಡಬೇಕಾಗಿದೆ. ಲೀಗಲ್ ಆಗಿದೆಯೋ ಇಲ್ಲೀಗಲ್ ಆಗಿದೆಯೋ ಎನ್ನುವ ಬಗ್ಗೆ ಯೋಚನೆ ಮಾಡೋಣ. ಇವತ್ತು ಲೀಗಲ್ ಆಗಿದೆಯೋ ಎನ್ನುವ ಬಗ್ಗೆ ಹೇಳುವುದಾದರೆ ಕೆಲವು ಕಡೆ ವಿಲೇಜ್ ಪಂಚಾಯಿತಿಯವರು ಲೈಸನ್ಸ್ ಕೊಟ್ಟಿದ್ದಾರೆ, ಡೆಪ್ಯುಟಿ ಕಮಿಷನರ್‌ರವರು ಕನ್‌ವರ್ಷನ್‌ಗೆ ಒಪ್ಪಿಗೆ ಕೊಟ್ಟಿದ್ದಾರೆ ಮತ್ತು ನಿಮ್ಮ ಅಧಿಕಾರಿಗಳು ನೋ ಅಬ್ಜೆಕ್ಷನ್ ಸರ್ಟಿಫಿಕೇಟ್ ಕೊಟ್ಟಿದ್ದಾರೆ ಅಂಥಾ ಮನೆಗಳನ್ನು ಇವತ್ತು ನೀವು ಹೊಡೆಯಬಹುದಕ್ಕೆ ಹೊರಟಿದ್ದೀರಿ ಅಂಥಾ ಕೆಲವು ಪ್ರಕರಣಗಳು ನನ್ನ ಹತ್ತಿರ ಇವೆ ಪೈನಲ್ ನೋಟಿಫಿಕೇಷನ್ ಆಗಿ ನಂಬರ್ ಕೂಡ ಆಗಿದೆ ಆ ಊರಿನ ಹೆಸರು ನಂಬರ್ ಎಲ್ಲಾ ಇದ, ಆದುದರಿಂದ ನಾವು ಈಗ ಯಾವುದು ಲೀಗಲ್ ಯಾವುದು ಇಲ್ಲೀಗಲ್ ಎನ್ನುವ ಬಗ್ಗೆ ತಿಳಿಯಬೇಕಾದರೆ ನಿಮ್ಮ ಬಿ ಡಿ.ಎ. ಅಧಿಕಾರಿಗಳನ್ನು ಕರೆಸಿ ಅವರನ್ನು ನಿಲ್ಲಿಸಿ ಕೇಳಿ ನಿಮಗೇನು ಮಾಡಬೇಕು ಎಂದು. ಅದನ್ನು ಬಿಟ್ಟು ಪಾಪ ಬಡಪಾಯಿ ಮನೆಯಲ್ಲಿದ್ದ ಒಡವೆ ಚಿನ್ನ ಮಾರಿ ಕೊಂಡು ಸಾಲಸೋಲ ಮಾಡಿ ೨೦–೨೫ ಸಾವಿರ ಖರ್ಚು ಮಾಡಿ ಮನೆ ಕಟ್ಟಿಸಿರುವುದನ್ನು ಒಡೆಯುವುದಕ್ಕೆ ಹೋಗಬೇಡಿ ಅದು ಧರ್ಮವಲ್ಲ ಅವರ ಶಾಪ ನಿಮ್ಮ ಬೆನ್ನು ಹತ್ತೀತು ಆದುದರಿಂದ ಇದರ ಬಗ್ಗೆ ತಾವು ಸರಿಯಾಗಿ ಆಲೋಚನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಚಿಕ್ಕಬೇಟೆ) .—ಅಧ್ಯಕ್ಷರೇ, ಈಗಾಗಲೇ ಪೂರ್ಣ ವಿವರವನ್ನು ಮಾನ್ಯ ಸದಸ್ಯರುಗಳು ಕೊಟ್ಟಿರುವುದರಿಂದ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ನಾವು ನಮ್ಮ ಸ್ನೇಹಿತರು ನೀವು ಬುಲ್ಡೋಜರ್ ತೆಗೆದುಕೊಂಡು ಹೋಗಿ ಮನೆಗಳನ್ನು ಒಡೆದು ಹಾಕಿ ಎಂದು ಹೇಳಿಲ್ಲ. ಎಲ್ಲಿ ನೀವು ರಸ್ತೆಗಳನ್ನು ಮಾಡುವಾಗ ಮನೆಗಳು ಅಡ್ಡ ಬರುತ್ತವೆ ಮತ್ತು ಅಂಡರ್ ಗ್ರೌಂಡ್ ಪೈಪ್ ಲೈನ್ಸ್ ಹಾಕುವುದಕ್ಕೆ ಅಡ್ಡ ಬರುತ್ತದೆ ಮತ್ತು ಎಲ್ಲಿ ಸಿವಿಕ್ ಅಮಿನಿಟೀಸ್‌ಗಳನ್ನು ಪ್ರೊವೈಡ್ ಮಾಡುವುದಕ್ಕೆ ಅಡ್ಡಿ ಬರುತ್ತದೆ ಅಂಥಾ ಮನೆಗಳನ್ನು ಬೇಕಾದರೆ ಒಡೆದು ಇವರಿಗೆ ಎಷ್ಟು ಜಾಗ ಬೇಕೋ ಅಷ್ಟನ್ನು ಬೇರೆ ಕಡೆಗೆ ಇಲ್ಲವೆ ಹಣವನ್ನು ಕೊಡಿ ಎಂದು ಹೇಳಿದ್ದೇವೆಯೋ ಹೊರತು ನೀವು ಮಾಡಿದ್ದು ಎಲ್ಲಾ ಸರಿಯೆಂದು ನಾವು ಹೇಳಿಲ್ಲ. ಇವತ್ತು ಸರ್ಕಾರ ಮಾಡಿರತಕ್ಕ ಅತ್ಯಾಚಾರ ಮತ್ತು ನಿಮ್ಮ ಅಧಿಕಾರಿಗಳು, ವಿಲೇಜ್ ಪಂಚಾಯಿತ್ ಲೆವಲ್‌ನಲ್ಲಿ ಆಗಿರತಕ್ಕ ಅನಾಚಾರ ಭ್ರಷ್ಟಾಚಾರದ ಕಾರಣ ಇವತ್ತು ಮುಗ್ಧ ಜನಗಳ ಕೊರಳಿಗೆ ಉರುಳಾಗಿ ಆಗತಕ್ಕ ರೀತಿಯಲ್ಲಿ ಆಗಿದೆ ಇದು ಸರಿಯಲ್ಲ ಇದನ್ನು ಮಾನವೀಯತೆಯಿಂದ ನೋಡಿಕೊಳ್ಳಿಬೇಕು ಎಂದು ನಾನು ಕೂಡ ಅಷ್ಟೇ ಹೇಳು

ವುದಕ್ಕೆ ಇಷ್ಟ ಪಡುತ್ತೇನೆ ಇಲ್ಲದೇ ಹೋದರೆ ಅವರು ಆಗಲೇ ಹೇಳಿದ್ದಾರೆ ಆಫೀಸ್, ನಾನು ಇನ್ನು ಹೆಚ್ಚಿಗೆ ಹೇಳುವುದಿಲ್ಲ,

ಶ್ರೀ ಹೆಚ್.ಎಲ್. ತಿಮ್ಮೇಗೌಡ (ಬಸವನಗುಡಿ).—ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ನಾವು ಸಿಟಿ ಲೆಜಿಸ್ಲೇಚರ್ಸ್ ಬಿಡಿಎ ಚೇರ್ಮನ್‌ರವರನ್ನು ಮೀಟ್ ಮಾಡಿದಾಗ ಹೇಳಿದ್ದೇವೆ. ಕಳೆದ ೩-೪ ವರ್ಷಗಳಿಂದ ಬಿಡಿಎ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇದರಿಂದ ಸಾವಿರಾರು ರೆವಿನ್ಯೂ ಸೈಟ್‌ಗಳಲ್ಲಿ ಮನೆಗಳನ್ನು ಕಟ್ಟಿರುವುದು ನಿಜ ಎನ್ನುತಕ್ಕದ್ದನ್ನು ಅವರು ಒಪ್ಪಿಕೊಂಡಿದ್ದಾರೆ. ನನ್ನ ಕ್ಷೇತ್ರದಲ್ಲಿ ಸುಮಾರು ೪ ಸಾವಿರ ೫ ಸಾವಿರ ಮನೆಗಳನ್ನು ಕಟ್ಟಿದ್ದಾರೆ. ಎಲ್ಲೆಲ್ಲಿ ರಸ್ತೆಗಳನ್ನು ಮಾಡುವುದಕ್ಕೆ ಮನೆಗಳು ಅಡ್ಡ ಬಂದಿದೆಯೋ ಅದನ್ನು ಡಿಮಾಲಿಶ್ ಮಾಡಲಿ, ಅದರ ಬಗ್ಗೆ ಮಾನ್ಯ ಶ್ರೀ ದೇವರಾಜ ಅರಸ್ ರವರು ಕೆಲವು ಅಂಕಿಅಂಶಗಳನ್ನು ಕೊಟ್ಟು ಹೇಳಿದ್ದಾರೆ. ಯಾವ ಲೇ ಔಟ್‌ಗಳಲ್ಲಿ ರಸ್ತೆ ಮಾಡುವಾಗ ಸಿವಿಕ್ ಎಮಿನಿಟೀಸ್‌ಗಳನ್ನು ಒದಗಿಸಿ ಕೊಡುವಾಗ ಮತ್ತು ವಾಟರ್ ಲೈನ್ ಹಾಕುವುದಕ್ಕೆ ಮನೆಗಳು ಅಡ್ಡಿ ಬರುತ್ತವೆಯೋ ಅಂಥಾ ಮನೆಗಳನ್ನು ಒಡೆಯಬೇಕಾಗುತ್ತದೆ, ಒಡೆಯಲಿ ಅದಕ್ಕೆ ನಮ್ಮ ಆಭ್ಯಂತರವಿಲ್ಲ. ಬೆಂಗಳೂರಿನ ಚಾಮರಾಜಪೇಟೆ ಮಿರ್ಜಾ ಸಾಹೇಬರ ಕಾಲದಲ್ಲಿ ಆದಂಥ ಲೇಔಟ್ ಆದಾದ ಮೇಲೆ ಜಯನಗರ ಲೇಔಟ್ ಆಯಿತು, ಈ ಎರಡು ಲೇಔಟ್ ಬಿಟ್ಟರೆ ಮಿಕ್ಕ ಯಾವ ಲೇಔಟ್‌ನಲ್ಲಿಯೂ ಸರಿಯಾಗಿ ರಸ್ತೆಗಳು ಆಗಿಲ್ಲ, ಅವುಗಳನ್ನೆಲ್ಲಾ ಹಾಗೆಯೇ ಬಿಡಿಎ ನವರು ''ರೀಕನ್‌ವೇ'' ಮಾಡಿಕೊಟ್ಟಿದ್ದಾರೆ. ನಮ್ಮ ಲೇಔಟ್‌ನಲ್ಲಿ ಬಿಡಿಎ ಯವರು ವ್ಯವಸ್ಥೆ ಮಾಡಿಕೊಟ್ಟಿದ್ದಾರೆ. ಹನುಮಂತನಗರದಲ್ಲಿ ೫೦ ಅಡಿ ರಸ್ತೆ ಇದೆ, ಆಲ್ಲಿ ಫುಟ್‌ಪಾತ್ ಸರಿ ಇಲ್ಲದೆ ಇರತಕ್ಕದ್ದು ೩೫ ಅಡಿ ಇದೆ. ಆಲ್ಲಿ ೩-೪ ಕಾರುಗಳು ಸಹ ಸರಿಯಾಗಿ ಓಡಾಡುವುದಕ್ಕಾಗುವುದಿಲ್ಲ. ಶ್ರೀನಗರಕ್ಕೆ ಹೋಗಬೇಕಾದರೆ ಆದೇ ರಸ್ತೆಯಲ್ಲಿ ಹೋಗಬೇಕು. ೧೫-೨೦ ಅಡಿ ರಸ್ತೆಗಳಿರುವ ಲೇಔಟುಗಳನ್ನು ರೀಕನ್‌ವೇ ಮಾಡಿಕೊಟ್ಟಿದ್ದಾರೆ. ಈ ರೀತಿ ೧೦-೨೦ ಅಡಿ ರಸ್ತೆಗಳಿರುವುದನ್ನೆಲ್ಲ ಅಪ್ಗ್ರೂವ್ ಮಾಡಿದರೆ ಬೆಂಗಳೂರಿನಲ್ಲಿ ೫೦ ಲಕ್ಷ ಜನಸಂಖ್ಯೆ ಇರುವುದು ೪೦ ಲಕ್ಷ ಆದಾಗ ರಸ್ತೆಗಳಲ್ಲಿ ವಾಹನಗಳ ಸಂಚಾರಕ್ಕೆ ತುಂಬ ತೊಂದರೆಯಾಗುತ್ತವೆ. ಲೇಔಟ್‌ಗೆ ಎಷ್ಟು ರಸ್ತೆಗಳು ಬೇಕು, ಏನೇನು ಸಿವಿಕ್ ಅಮೆನಿಟೀಸ್ ಇರಬೇಕು, ಎಲ್ಲೆಲ್ಲಿ ನೀರಿನ ಕೊಳವೆಗಳು ಹೋಗಬೇಕು ಅದಕ್ಕೆಲ್ಲ ಜಾಗ ಬಿಡಬೇಕಾಗುತ್ತದೆ. ಅಂಥ ಸಂದರ್ಭದಲ್ಲಿ ರಸ್ತೆಗಳಿಗೆ ಮತ್ತೊಂದಕ್ಕೆ ಅಡ್ಡ ಬರತಕ್ಕ ಮನೆಗಳನ್ನು ಒಡೆಯಬಹುದು. ಹಾಗೆ ಒಡೆದಾಗ ನಿರಾಶ್ರಿತ ರಾದವರಿಗೆ ಬದಲಿ ಸೈಟುಗಳನ್ನು ಕೊಡಬೇಕೆಂದು ಬಿಡಿಎ ಅಧ್ಯಕ್ಷರಿಗೆ ಹೇಳಿದ್ದೇವೆ. ಈ ರೀತಿಯಾಗಿ ಸದನದಲ್ಲಿ ಆನುಪಾನ ವ್ಯಕ್ತಪಡಿಸಿರುವಾಗ ಮಾನ್ಯ ಮಂತ್ರಿಗಳು ಲೇಔಟುಗಳನ್ನು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ, ಲೇಔಟುಗಳಲ್ಲಿ ಇರತಕ್ಕ ಎಲ್ಲ ಮನೆಗಳನ್ನು ಒಡೆಯುವುದು ಸರಿಯಲ್ಲ. ಯಾರು ಲೇಔಟ್ ಪ್ರಕಾರ ಮನೆಗಳನ್ನು ಕಟ್ಟಿರುತ್ತಾರೆ ಅವರ ಮನೆಗಳನ್ನೆಲ್ಲ ಒಡೆಯಿರಿ ಎಂದು ಹೇಳುವುದಿಲ್ಲ. ಆವರಿಗೆ ಆಗತ್ಯವಾಗಿ ಬೇಕಾದ ನೀರಿನ ಸೌಲಭ್ಯ ವಿದ್ಯುಚ್ಛಕ್ತಿ ಸೌಲಭ್ಯ ಇತ್ಯಾದಿಗಳನ್ನು ಕೊಡುವುದಕ್ಕೆ ಆವರಿಂದ ಹಣ ವಸೂಲ್ಮಾಡಬೇಕು. ಈ ಒಂದು ವ್ಯವಸ್ಥೆಗಾಗಿ ನಮ್ಮ ಕ್ಷೇತ್ರದಿಂದ ಒಂದೂವರೆ ಕೋಟಿ ರೂಪಾಯಿಗಳನ್ನು ಕೊಡಬೇಕಾಗಿತ್ತು, ಆ ಪೈಕಿ ಈಗಾಗಲೇ ೭೦ ಲಕ್ಷ ರೂಪಾಯಿಗಳನ್ನು ಕೊಡಿಸಿದ್ದೇವೆ. ಎಲ್ಲಿ ಲೇಔಟ್ ಪ್ರಕಾರ ಮನೆಗಳನ್ನು ಕಟ್ಟಿಲ್ಲ ಅಂಥ ಕಡೆ ಲೇಔಟನ್ನು ಸರಿ ಮಾಡುವುದಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಿ ಎಂದು ಹೇಳುತ್ತೇನೆ.

ಶ್ರೀ ಪಿ. ರಾಮಚಂದ್ರ (ಮಲ್ಲೇಶ್ವರ).—ಮಾನ್ಯ ಅಧ್ಯಕ್ಷರೇ, ಸರ್ಕಾರವೇ ಹುಟ್ಟು ಹಾಕತಕ್ಕ ಬೃಹತ್ ಸಮಸ್ಯೆಗಳಲ್ಲಿ ಇದೂ ಒಂದು. ೧೯೬೧ರಲ್ಲಿ ಪಾಸ್ ಆಗಿರತಕ್ಕ ಟೌನ್ ಪ್ಲಾನಿಂಗ್ ಆಕ್ಟ್ ಇದೆ, ಬಿಡಿಎ ಮತ್ತು ಕಾರ್ಪೊರೇಷನ್ ಆಕ್ಟ್‌ಗಳು ಸಹ ಇವೆ. ಈ ಎಲ್ಲ ಆಕ್ಟ್‌ಗಳನ್ನು ಓದಿದಾಗ ಲೇಔಟ್‌ಗಳನ್ನು ಮಾಡುವ ಬಗ್ಗೆ ಆದರಲ್ಲಿ ಬೇಕಾದಷ್ಟು ನಿಯಮಗಳನ್ನು ಹಾಕಿರುವುದನ್ನು ಕಾಣುತ್ತೇವೆ. ಆದರೆ ಈ ನಿಯಮಗಳನ್ನೆಲ್ಲ ಉಲ್ಲಂಘನೆ ಮಾಡಿ ಆಗಿನ ರೆವಿನ್ಯೂ ಮಂತ್ರಿಗಳಾಗಿದ್ದ ಶ್ರೀಮಾನ್ ಬಂಗಾರಪ್ಪನವರು ವಿಕಾವಿಕಿ ಅಗ್ರಿಕಲ್ಚರಲ್ ಲ್ಯಾಂಡನ್ನು ಯಾವುದೇ ಉಪಯೋಗಕ್ಕಾದರೂ ಸರ್ಕಾರ ಅಥವಾ ಸಂಬಂಧಪಟ್ಟ ಸಂಸ್ಥೆಗಳು ಸರ್ಕಾರದ ಅನುಮತಿ ಇಲ್ಲದೆ ಉಪಯೋಗ ಮಾಡಿಕೊಳ್ಳಬಹುದೆಂದು ಮಾಡಿದರು. ಈ ರೀತಿಯಾಗಿ ಯಾವ ಉದ್ದೇಶದಿಂದ ಮಾಡಿಕೊಟ್ಟರು ? ನಾವೆಲ್ಲಾ ಬೆಂಗಳೂರು ನಗರದಲ್ಲಿ ಕಾರ್ಪೊರೇಟರ್ ಆಗಿ ಕೆಲಸ ಮಾಡಿರತಕ್ಕವರು, ಬೆಂಗಳೂರು ನಗರ ಚನ್ನಾಗಿರಬೇಕು, ಆಡಳಿತ ಚನ್ನಾಗಿರಬೇಕು, ನಗರದ ನಾಗರೀಕರಿಗೆಲ್ಲ ಆಗತ್ಯ ಸೌಲಭ್ಯಗಳು ದೊರೆಯುವಂತಾಗ ಬೇಕೆಂಬ ದೃಷ್ಟಿಯಿಂದ ಹಗಲು ರಾತ್ರಿ ಪ್ರಾಮಾಣಿಕತೆಯಿಂದ ಕೆಲಸ ಮಾಡಿರತಕ್ಕವರು. ಆವತ್ತಿನ

ದಿವಸ ಯಾವುದೇ ಲೇಔಟ್ ಮಾಡಬೇಕಾದರೂ ಕಾರ್ಪೊರೇಷನ್ ಆಕ್ಟ್ ಪ್ರಕಾರ ಕಾರ್ಪೊರೇಷನ್ ಅನುಮತಿಯನ್ನು ತೆಗೆದುಕೊಳ್ಳಬೇಕಾಗಿತ್ತು. ಅವರು ಅನುಮತಿ ನೀಡತಕ್ಕ ಸಂದರ್ಭದಲ್ಲಿ [redacted] ಬೇಕಾದ ನೀರಿನ ವ್ಯವಸ್ಥೆ, ದೀಪದ ವ್ಯವಸ್ಥೆ, ಚರಂಡಿ ವ್ಯವಸ್ಥೆ ಮುಂತಾದ ಅಗತ್ಯ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ಡೆವಲಪ್‌ಮೆಂಟ್ ಚಾರ್ಜಸ್ ಎಂದು ಹಣ ಕಟ್ಟಿಸಿಕೊಂಡು [redacted] ಅನುಮತಿ ಕೊಡುತ್ತಿದ್ದರು. ಇದನ್ನೆಲ್ಲ ಬಿಟ್ಟು ಏಕಾಏಕಿ ಮಾನ್ಯ ಬಂಗಾರಪ್ಪನವರು ಪರ್ಮಿಷನ್ ಕೊಟ್ಟರು. ಅವರು ಪರ್ಮಿಷನ್ ಕೊಟ್ಟ ಕೇವಲ ೬–೮ ತಿಂಗಳಲ್ಲಿ ಬೆಂಗಳೂರು ನಗರದಲ್ಲಿ ಮೂರುವರೆ ಲಕ್ಷ ಸೈಟುಗಳು ಆದವು. ಇವತ್ತಿನ ದಿವಸ ಆ ಸೈಟುಗಳನ್ನು ತೆಗೆದುಕೊಂಡಿರುವವರು ಬಡಪರಾದ್ದರಿಂದ ಅವರ ಬಗ್ಗೆ ಕನಿಕರ ತೋರಬೇಕಾಗಿತ್ತದೆ. ಅವರ ಮನೆಗಳನ್ನು ಒಡೆಯುವುದಕ್ಕೆ ಸಂಕಟವಾಗುತ್ತದೆ. ಆದರೆ ಇವತ್ತು ಏನಾಗಿದೆ ಎಂದರೆ, ಬಡವರ ಹೆಸರಿನಲ್ಲಿ ಬೆಂಗಳೂರು ನಗರವನ್ನು ಸಂಪೂರ್ಣವಾಗಿ ಹಾಳು ಮಾಡತಕ್ಕ ಕಾರ್ಯ ನಡೆದಿದೆ. ಇದನ್ನು ನಾವು ಅನೇಕ ಬಾರಿ ಮಾನ್ಯ ಬಂಗಾರಪ್ಪನವರಿಗೂ ಹೇಳಿದ್ದೇವೆ ಮತ್ತು ಮಾನ್ಯ ಖಾರ್ಗೆಯವರಿಗೂ ಹೇಳಿದ್ದೇವೆ. ಬೆಂಗಳೂರಿನ ಸುತ್ತಮುತ್ತ ಆದ ಸೈಟುಗಳನ್ನು ಹತೋಟಿಗೆ ತರುವುದಕ್ಕೆ ೬–೮ ತಿಂಗಳುಗಳು ಕಳೆದ ಮೇಲೆ ಪ್ರಯತ್ನ ಮಾಡಿದರು. ಆದರೂ ಸಾಕಷ್ಟು ಅನಾಹುತವಾಯಿತು. ನಾನು ಮಲ್ಲೇಶ್ವರ ಕ್ಷೇತ್ರದ ಪ್ರತಿನಿಧಿ. ನಮ್ಮ ಭಾಗಕ್ಕೆ ಸಂಬಂಧ ಪಟ್ಟಹಾಗೆ ಯಶವಂತಪುರ, ಗೋಕುಲ, ಮತ್ತಿಕೆರೆ ಮುಂತಾದ ಕಡೆಗಳಲ್ಲಿ ಬೇಕಾದಷ್ಟು ಲೇಔಟ್‌ಗಳನ್ನು ಮಾಡಿದ್ದಾರೆ. ಆಲ್ಲಿನ ಜನರಿಗೆ ೨೦ ವರ್ಷಗಳಾದರೂ ಯಾವುದೇ ರೀತಿಯ ಸೌಕರ್ಯಗಳನ್ನು ಕೊಡುವುದಕ್ಕಾಗಿಲ್ಲ. ಆಟದ ಮೈದಾನಕ್ಕಾಗಿ ಅವರು ಜಾಗವನ್ನು ಕೇಳುತ್ತಾರೆ, ಆಸ್ಪತ್ರೆ, ಶಾಲೆ–ಕಾಲೇಜು, ನೀರು, ದೀಪ, ಒಳಚರಂಡಿ ವ್ಯವಸ್ಥೆ ಮುಂತಾದ ಅಗತ್ಯ ಸೌಲಭ್ಯಗಳು ಬೇಕು ಎಂದು ಕೇಳುತ್ತಾರೆ. ಅವರಿಗೆ ಕೇಳುವುದಕ್ಕೂ ಹಕ್ಕು ಇದೆ, ಅವರು ನಮಗೆ ಓಟು ಕೊಟ್ಟವರೂ ಆಗಿದ್ದಾರೆ, ಆದ್ದರಿಂದ ಅವರು ತಮ್ಮ ಬೇಡಿಕೆಗಳನ್ನು, ಕುಂದು ಕೊರತೆಗಳನ್ನು ನಮ್ಮ ಮುಂದಿಡುವ ಸಂಪೂರ್ಣ ಅಧಿಕಾರವನ್ನು ಪಡೆದಿರುತ್ತಾರೆ. ಈ ಸಂದರ್ಭದಲ್ಲಿ, ಹಿಂದೆ ಮಾಡಿರತಕ್ಕ ಲೇಔಟ್‌ಗಳು ಆಧೋಗತಿಯಲ್ಲಿರುವಾಗ ತಿಳಿದೂ ತಿಳಿದೂ ಸರ್ಕಾರ ಅನುಮತಿ ನೀಡಿ ಬೆಂಗಳೂರು ನಗರವನ್ನು ಹಾಳು ಮಾಡಿದೆ ಎಂದು ಬಹಳ ಸಂಕಟದಿಂದ ಹೇಳಬೇಕಾಗಿದೆ. ಇವತ್ತಿನ ದಿವಸ ಲೇಔಟುಗಳನ್ನು ಮಾಡಿದವರು ಪ್ರತಿ ಲೇಔಟಿನಲ್ಲಿ ೧೫–೨೦ ಸೈಟುಗಳನ್ನು ಇಟ್ಟುಕೊಂಡು ಹಣ ಆದರೆ ಒಂದೊಂದು ಸೈಟುಗಳನ್ನು ಕೊಂಡು ಕೊಂಡಿರುವವರು ತುಂಬ ಬಡವರಾಗಿದ್ದಾರೆ. ಕಳೆದ ೨-೩ ವರ್ಷಗಳಿಂದ ಬಿಡಿಎ ಸರಿಯಾಗಿ ಕೆಲಸ ಮಾಡದೆ ಸಾರ್ವಜನಿಕರಿಗೆ ಸೈಟುಗಳನ್ನು ವಿತರಣೆ ಮಾಡಿಲ್ಲ. ಆದ್ದರಿಂದ, ಬಡವರು ಏನು ಸೈಟುಗಳನ್ನು ಕೊಂಡುಕೊಂಡಿದ್ದಾರೆ ಅವರ ಸೈಟುಗಳು ಹೋಗದ ಹಾಗೆ ಸರ್ಕಾರ ಎಚ್ಚರಿಕೆ ವಹಿಸಬೇಕೆಂದು ಹೇಳಬಯಸುತ್ತೇನೆ. ನೋಟಿಫೈಡ್ ಲ್ಯಾಂಡ್ಸ್ ಎಂದರೆ ಅದರ ಮೇಲೆ ೧೮ ತಿಂಗಳೊಳಗೆ ಕ್ರಮ ಕೈಗೊಳ್ಳಬೇಕಾಗಿತ್ತು. ಆದರೆ ೧೮ ತಿಂಗಳಾದರೂ ಆ ಕಡೆ ಗಮನ ಹರಿಸದೆ ಇದ್ದುದರಿಂದ ಎಲ್ಲ ಲ್ಯಾಪ್ಸ್ ಆಗಿದೆ. ಅಂಥ ಲ್ಯಾಂಡ್‌ಗಳಲ್ಲಿ ಕೂಡ ಸೈಟುಗನನ್ನು ಮಾಡಿದ್ದಾರೆ. ಆಮೇಲೆ ತಾವು ಅವುಗಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವುದಕ್ಕೆ ಹೋಗಿದ್ದೀರಿ. ಈ ರೀತಿ ತಮ್ಮ ಕರ್ತವ್ಯದಲ್ಲಿ ನ್ಯೂನತೆ ಇಟ್ಟುಕೊಂಡು ಹೋಗುವುದು ಸರಿಯಲ್ಲ. ಇವತ್ತು ನೀವು ಬೆಂಗಳೂರು ಟೌನ್ ಪ್ಲಾನಿಂಗ್ ಆಕ್ಟ್ ಮತ್ತು ಕಂಟ್ರಿ ಪ್ಲಾನಿಂಗ್ ಆಕ್ಟ್‌ಗಳ ಪ್ರಕಾರ ಔಟ್‌ಲೈನ್ ಡೆವಲಪ್‌ಮೆಂಟ್ ಪ್ಲಾನ್ ಎಂದು ಏನು ಮಾಡಿದ್ದೀರಿ ಅದನ್ನು ಜಾರಿಗೆ ತನ್ನಿ. ಅದನ್ನು ಜಾರಿಗೆ ತರುವಾಗ ಯಾರಿಗೆ ಏನಾದರೂ ತೊಂದರೆಯಾದರೆ ವಿಚಾರ ಮಾಡೋಣ. ಇಂದು ಲೇಔಟುಗಳನ್ನು ಮಾಡಿರತಕ್ಕವರು ತಮ್ಮದೇ ಆದ ಒಂದು ಸಂಘವನ್ನು ಮಾಡಿಕೊಂಡಿದ್ದಾರೆ. ಅವರಿಗೆ ಕೂಡ ನಾವು ಈ ಆಕ್ಟನ್ನು ಜಾರಿಗೆ ತರುವಾಗ ವಿರೋಧ ಮಾಡಬಾರದೆಂದು ಹೇಳಬೇಕು. ಆ ಪ್ರಕಾರ ಕೆಲಸ ಮಾಡುವಾಗ ಮನೆಗಳಾಗಲೀ, ಸೈಟುಗಳಾಗಲಿ ಆಡ್ಡ ಬಂದರೆ ಅವಕ್ಕೆ ಬದಲಾಗಿ ಬೇರೆ ಕಡೆ ಕೊಡಬೇಕು. ಇವತ್ತಿನ ದಿವಸ ಈ ಒಂದು ನಗರದಲ್ಲಿ ಇದು ಒಂದು ದೊಡ್ಡ ವ್ಯಾಪಾರವಾಗಿದೆ. ಮುಂದಿನ ೨೦ ವರ್ಷಗಳ ನಗರದ ಬೆಳವಣಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಸರ್ಕಾರದ ಅನುಮತಿ ಇಲ್ಲದೆ ಸೈಟುಗಳು ರಿಜಿಸ್ಟ್ರೇಷನ್ ಆಗದ ಹಾಗೆ ಮಾಡಬೇಕಾಗಿತ್ತು. ಈಗ ಆಗಿರುವುದು ಆಗಿದೆ, ಇನ್ನು ಮುಂದಾದರೂ ಹೀಗಾಗದಂತೆ ಸುತ್ತಮುತ್ತ ಇರತಕ್ಕ ಜಾಗವನ್ನು ಸರ್ಕಾರ ಸ್ಕ್ರುಸ್ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಯಾರ ಮನೆಗಳನ್ನು ಡಿಮಾಲಿಷ್ ಮಾಡುತ್ತೀರಿ ಅವರಿಗೆ ಬದಲಿ ವ್ಯವಸ್ಥೆ ಮಾಡಿಕೊಡಬೇಕು. ಏನೇ ಆಗಲಿ, ಡಿಮಾಲಿಷನ್ ಮಾಡಿಸುವುದು ಸರಿಯಲ್ಲವೆಂದು ನನ್ನ ಅಭಿಪ್ರಾಯ ಏಕೆಂದರೆ ಆ ಸೈಟುಗಳು

ಬಡವರು ಮಾಡಿಕೊಂಡಿರುವ ಆಸ್ತಿಯಾಗಿರುತ್ತದೆ. ಇವತ್ತಿನ ದಿವಸ ಲೇಔಟ್ ಮಾಡಿ ಸೈಟುಗಳನ್ನು ಗೂರಾಟ ಮಾಡಿದ ನನ್ನ ಸ್ನೇಹಿತನೊಬ್ಬ ಲಕ್ಷಾಂತರ ರೂಪಾಯಿಗಳನ್ನು ಸಂಪಾದನೆ ಮಾಡಿಕೊಂಡು ಆರಾಮವಾಗಿದ್ದಾನೆ. ಈಗ ಸಿಕ್ಕಿಹಾಕಿಕೊಂಡಿರುವವರು ಆ ಸೈಟುಗಳನ್ನು ಕೊಂಡುಕೊಂಡಂತಹ ಬಡ ಜನ. ಇತ್ತೀಚೆಗೆ ಚಂದ್ರು ಲೇಔಟಿನಲ್ಲಿ ಮನೆಗಳನ್ನು ಒಡೆದಿದ್ದಾರೆ. ಒಂದು ಸರ್ವೆ ನಂಬರನ್ನು ಸ್ವಾಧೀನಪಡಿಸಿಕೊಳ್ಳುವುದು ಮಂತ್ರೊಂದನ್ನು ಕೈಬಿಡುವುದು, ಈ ರೀತಿ ಮಾಡುತ್ತಿದ್ದಾರೆ. ಅಂದರೆ ಹಣ ಕೊಟ್ಟವರದ್ದನ್ನು ಬಿಡುತ್ತಿದ್ದಾರೆ. ಹೀಗಾಗಿ ಬಿಡಿವನಲ್ಲಿ ಜನ ಸಾಮಾನ್ಯರಿಗೆ ಏನು ನ್ಯಾಯ ಸಿಗಬೇಕಾಗಿತ್ತೋ ಅದು ಸಿಗುತ್ತಿಲ್ಲ. ಇದು ಒಂದು ದೊಡ್ಡ ಸಮಸ್ಯೆಯಾಗಿದೆ. ಇದನ್ನು ಸರ್ಕಾರದವರು ಪರಿಹಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

೧೨–೨೦ ಪಿ.ಎಂ.

ಶ್ರೀ ಮಳ್ಳೂರು ಆನಂದರಾವ್ (ರಾಜಾಜಿನಗರ).—ಮಾನ್ಯ ಅಧ್ಯಕ್ಷರೇ, ಇದು ಬಹಳ ಗಂಭೀರವಾದ ಸಮಸ್ಯೆ. ಮಾನ್ಯ ದೇವರಾಜ ಅರಸ್ ಅವರು ಇದರ ಬಗ್ಗೆ ಬಹಳ ವ್ಯಾಖ್ಯಾನ ಮಾಡಿ ಇದರ ಗಂಭೀರತೆಯನ್ನು ಚೆನ್ನಾಗಿ ಹೇಳಿದ್ದಾರೆ. ಅವರು ಹೇಳಿದ ಒಂದೊಂದು ಮಾತೂ ೧೦೦ಕ್ಕೆ ೨೦೦ರಷ್ಟು ಸತ್ಯ. ಆದ್ದರಿಂದ ಅವರಿಗೆ ನಾನು ಪೂರ್ತಿ ಬೆಂಬಲ ಕೊಡುತ್ತೇನೆ. ಆದರೆ ದುರ್ದೈವದ ಸಂಗತಿಯೆಂದರೆ ಒಂದೂವರೆ ಲಕ್ಷ ಸೈಟುಗಳಲ್ಲಿ ಒಂದೂವರೆ ಲಕ್ಷ ಅನಧಿಕೃತ ಮನೆಗಳನ್ನು ಏನು ಕಟ್ಟಿದ್ದಾರೆ ಅದರಲ್ಲಿ ಶೇಕಡ ೮೦ರಷ್ಟು ಮನೆಗಳಾಗಿದ್ದು ಅವರ (ದೇವರಾಜ ಅರಸ್ ಅವರ) ಕಾಲದಲ್ಲಿ. ನಾನೇ ಈ ಸದನದಲ್ಲಿ ಅವರು ಇಲ್ಲಿದ್ದಾಗ ಮೂರು ನಾಲ್ಕು ಬಾರಿ ಪ್ರಸ್ತಾಪ ಮಾಡಿದ್ದೇನೆ. ಅವರ ಗಮನಕ್ಕೆ ಅದು ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಏಕೆಂದರೆ ಸಾಮಾನ್ಯವಾಗಿ ಮುಖ್ಯ ಮಂತ್ರಿಗಳಾಗಿರುವವರಿಗೆ ಇಂಥ ಸಣ್ಣ ಪುಟ್ಟ ವಿಷಯಗಳು ಗಮನಕ್ಕೆ ಬರುವುದಿಲ್ಲ. ಆ ಸ್ಥಾನ ಹೋದ ಮೇಲೆ ಬರುತ್ತದೆ. ಹತ್ತಾರು ಬಾರಿ ಅನಧಿಕೃತ ಮನೆಗಳಾಗುತ್ತಿರುವ ಬಗ್ಗೆ ಆ ಕಡೆ ಕಳಿತು ನಾನು ಪ್ರಸ್ತಾಪ ಮಾಡಿದ್ದೇನೆ. ಮಾನ್ಯ ಅರಸರ ಧೋರಣೆ ಬಡವರು ಕಟ್ಟಿಕೊಂಡು ಹೋಗಲಿ ಎಂದು ಇರಬಹುದು. ರಾಜಾಜಿನಗರ ಕ್ಷೇತ್ರದಲ್ಲಿ ೬ ಸಾವಿರ ಅನಧಿಕೃತ ಮನೆಗಳಿವೆ. ಸುಮಾರು ನಾಲ್ಕೈದು ವರ್ಷದಲ್ಲಿ ಅವು ಬಂದಿವೆ. ಅವರು ಕಂಪ್ಲೀಟ್ ಲೇ ಔಟ್ ಮಾಡಿ ಕಟ್ಟಿಕೊಂಡಿದ್ದಾರೆ. ಮಾನ್ಯ ದೇವರಾಜ ಅರಸ್ ಅವರು ನಂದಿನಿ ಲೇ ಔಟ್‌ನಲ್ಲಿ ನಡೆದ ಘಟನೆ ಬಗ್ಗೆ ಏನು ಹೇಳಿದರು ಅದು ನಡೆದಿರುವುದು ನನ್ನ ಕ್ಷೇತ್ರದಲ್ಲಿ ನಾವು ಎರಡು ಸಾರಿ ಇಂಜಿನಿಯರ್‌ಗಳಿಗೆ ಹೇಳಿ ಮನೆ ಒಡೆದು ಹಾಕುವುದನ್ನು ನಿಲ್ಲಿಸಿದ್ದೇವೆ. ಮೂರನೇ ಬಾರಿ ಕೋರ್ಟ್‌ನಿಂದ ಆಜ್ಞೆ ಇದ್ದರೂ ಕೂಡ ಅಲ್ಲಿನ ಸ್ಥಳೀಯ ಕಂಟ್ರಾಕ್ಟರುಗಳು ಮತ್ತು ಇಂಜಿನಿಯರುಗಳು ಕೊಲಾಬರೇಟಾಗಿ ಒಡೆಯುವುದಕ್ಕೆ ಹೋದಾಗ ೫ ಸಾವಿರ ಜನ ಅದನ್ನು ತಡೆಯುವುದಕ್ಕೆ ಹೋದರು, ಆಗ ಟಿಯರ್ ಗ್ಯಾಸ್ ಬಿಟ್ಟರು. ಗಲಾಟೆಯಾಯಿತು. ಮಾನ್ಯ ಮಂತ್ರಿಗಳು ಕೇವಲ ನೀರು ಮತ್ತು ಒಳಚರಂಡಿ ಪೈಪ್ ಹಾಕುವುದಕ್ಕೆ ಮಾತ್ರ ಒಡೆಯುತ್ತಿದ್ದೇವೆ ಎಂದು ಹೇಳುತ್ತಾರೆ. ಹಾಗಾದರೆ ನಾನು ಮಾನ್ಯ ಮಂತ್ರಿಗಳಲ್ಲಿ ಒಂದು ನಿರ್ದಿಷ್ಟವಾದ ಪ್ರಶ್ನೆ ಕೇಳುತ್ತೇನೆ, ಉಳಿದ ಮನೆಗಳನ್ನು ನೀವು ಒಡೆಯುವುದಿಲ್ಲವೇ ? ಮಾನ್ಯ ದೇವರಾಜ ಅರಸ್ ಅವರು ಹೇಳಿದ ಹಾಗೆ ೬೫–೭೦ ಸಾವಿರ ಅನಧಿಕೃತ ಮನೆಗಳಿವೆ. ನೀರು ಮತ್ತು ಒಳಚರಂಡಿ ಲೈನ್ ಹಾಕಿ ಉಳಿದ ಜಾಗವನ್ನು ಅವರಿಗೇ ಬಿಟ್ಟುಕೊಡುತೀರಾ ? ಇಲ್ಲ. ಮೊದಲು ಒಳಚರಂಡಿ ಮತ್ತು ನೀರಿನ ಪೈಪ್ ಹಾಕುವುದಕ್ಕೆಂದು ಒಡೆಯುತ್ತಾರೆ, ಆ ಮೇಲೆ ಉಳಿದ ಮನೆಗಳನ್ನೆಲ್ಲಾ ಒಡೆದು ಲೇ ಔಟ್ ಮಾಡಿ ಬೇರೆಯವರಿಗೆ ಹಂಚುತ್ತಾರೆ. ಒಳಚರಂಡಿ ಲೈನ್‌ಗೆ ಚಾರ್ಜ್ ಕೊಡುವವರು ಯಾರು? ಅದರ ಅಭಿವೃದ್ಧಿಗೆ ಚಾರ್ಜ್ ಕೊಡುವವರು ಯಾರು ? ಸರ್ಕಾರದವರು ತೆಗೆದುಕೊಳ್ಳುವ ಕ್ರಮ ಕಣ್ಣೊರೆಸುವ ತಾತ್ಕಾಲಿಕ ಕ್ರಮವಾಗುತ್ತದೆ, ಅಷ್ಟನ್ನೆಲ್ಲಾ ಒಡೆಯುವುದಕ್ಕೆ ಹೋದರೆ ಜನ ಬಿಡುವುದಿಲ್ಲ. ಸಿಕ್ಕಾಪಟ್ಟೆ ಆಶಾಂತಿಯಾಗುತ್ತದೆ. ಹಿಂದೆ ಒಡೆಯುವುದಕ್ಕೆ ಹೋದಾಗ ಸಿಕ್ಕಾಪಟ್ಟೆ ಗಲಾಟೆಯಾಗಿ ನಾನು ಪೋಲೀಸ್ ಸ್ಟೇಷನ್‌ಗೆ ಫೋನ್ ಮಾಡಿ ಹೇಳಿದೆ. ಹೆಂಗಸರು ಮಕ್ಕಳು ಬಂದು ರಸ್ತೆಯಲ್ಲಿ ಅಡ್ಡ ಮಲಗಿದರು. ಪೋಲೀಸರು ವ್ಯಾನ್ ತಂದು ಇವರನ್ನೆಲ್ಲಾ ಕರೆದುಕೊಂಡು ಹೋಗಿ ಮನೆ ಒಡೆಯುವುದಕ್ಕೆ ಪ್ರಾರಂಭ ಮಾಡಿದರು. ಇದರಿಂದ ಪರಿಸ್ಥಿತಿ ಏನಾಗಬಹುದು ಎಂಬುದನ್ನು ಯೋಚನೆ ಮಾಡಿ. ಇಷ್ಟೆಲ್ಲಾ ಕಟ್ಟುವುದಕ್ಕೆ ಅವಕಾಶ ಮಾಡಿಕೊಟ್ಟವರು ಯಾರು? ಅದೇ ಇಂಜಿನಿಯರುಗಳು ಅಲ್ಲೇ ನಿಂತುಕೊಂಡು ೫೦೦ ರೂಪಾಯಿ ೧೦೦೦ ರೂಪಾಯಿ ಲಂಚ ತೆಗೆದುಕೊಂಡು ಕಟ್ಟುವುದಕ್ಕೆ ಅವಕಾಶ ಮಾಡಿಕೊಟ್ಟರು. ಸೈಟ್ ರಿಜಿಸ್ಟ್ರೇಷನ್ ಮಾಡುವುದಕ್ಕೆ

ತಾವು ಅಪ್ಪಣೆ ಕೊಟ್ಟಿರಿ. ಎಲ್ಲಾ ಬಡಪಾಯಿಗಳು ಮನೆ ಕಟ್ಟಿಕೊಂಡಿದ್ದರೆ ಬುಲ್ಡೋಜರ್ ತೆಗೆದು ಕೊಂಡು ಒಡೆಯುವುದಕ್ಕೆ ಹೋಗುತ್ತೀರಲ್ಲ ಇದೆಂಥ ವಿಪರ್ಯಾಸ? ದಯವಿಟ್ಟು ಇದನ್ನು ಮಾಡಬೇಡಿ. ದಯವಿಟ್ಟು ಅವರವರ ಮನೆಗಳನ್ನು ಅವರಿಗೇ ರೀಕನ್ಸ್ಟ್ರೀ ಮಾಡಿಕೊಡಿ. ಇಡೀ ಟೌನ್ ಪ್ಲಾನನ್ನೇ ರೀಕಾನ್ಸ್ಟ್ ಮಾಡಬೇಕಾಗುತ್ತದೆ. ರಸ್ತೆಗೆ ೩೦ ಅಡಿ ಜಾಗ ಬಿಟ್ಟು ಅವರು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇವರು ೬೦ ಅಡಿ ರಸ್ತೆ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ೬೦ ಅಡಿ ಬದಲು ೩೦ ಅಡಿ ರಸ್ತೆ ಮಾಡುವ ಹಾಗಿದ್ದರೆ ಆ ರೀತಿಮಾಡಿ ಆ ಮನೆಗಳನ್ನು ಉಳಿಸಬಹುದು. ಈ ವಿಷಯವನ್ನು ಬಿ.ಡಿ.ಎ.ಯವರಿಗೆ ಬಿಟ್ಟರೆ ಗೊಂದಲವಾಗುತ್ತದೆ. ಬಿ.ಡಿ.ಎ.ನವರ ಕೈಯಲ್ಲಿ ಸಾಧ್ಯವಾಗುವುದಿಲ್ಲ. ಬಿ.ಡಿ.ಎ. ವ್ಯಾಪ್ತಿ ಮೀರಿದ ಅನೇಕ ಸಮಸ್ಯೆಗಳು ಇದರಲ್ಲಿವೆ. ಈ ವಿಷಯದಲ್ಲಿ ಮಾನ್ಯ ದೇವರಾಜ ಅರಸ್ ಅವರು ಹೇಳುವ ಮಾತನ್ನು ಸಂಪೂರ್ಣವಾಗಿ ನಾನು ಒಪ್ಪುತ್ತೇನೆ. ಬೆಂಗಳೂರಿನಲ್ಲಿರತಕ್ಕ ಎಲ್ಲ ಶಾಸಕರನ್ನೊಳಗೊಂಡ ಸಮಿತಿಯನ್ನು ಮಾಡಿ. ಅವರು ಎಲ್ಲಾ ಲೇ ಔಟ್‌ಗಳಿಗೆ ಹೋಗಿ ಯಾರು ಯಾರು ಅನಧಿಕೃತವಾಗಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ ಎಂಬ ಬಗ್ಗೆ ಪರಿಶೀಲನೆ ಮಾಡಿ ಈ ಸಮಸ್ಯೆಯನ್ನು ಹೇಗೆ ಪರಿಹರಿಸಬೇಕು ಎಂಬುದರ ಬಗ್ಗೆ ಪರಿಶೀಲನೆ ಮಾಡಲಿ. ಆ ರೀತಿ ಮಾಡಿದರೆ ಮಾತ್ರ ಈ ಸಮಸ್ಯೆಯನ್ನು ಬಗೆಹರಿಸಬಹುದು. ಇಲ್ಲದಿದ್ದರೆ ೬೦,೦೦೦ × ೫೦ರಷ್ಟು ಜನ ವಿಧಾನಸೌಧಕ್ಕೆ ಬಂದು ಘೇರಾವೂ ಮಾಡುತ್ತಾರೆ. ದೇವರಾಜ ಅರಸರಿಗೆ ಅದು ಗೊತ್ತು. ಈಗ ಅವರ ಹಿಂದೆ ೬೦,೦೦೦ × ೫೦ ಜನ ಇದ್ದಾರೆ. ಅದಕ್ಕೋಸ್ಕರವೇ ಅವರು ಅದರ ಮುಖಂಡತ್ವವನ್ನು ವಹಿಸಿಕೊಂಡಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—೬೦ ಸಾವಿರ ಮನೆಯವರು ನನ್ನ ಕಡೆ ಬರುತ್ತಾರೆಂದು ಈ ವಿಷಯವನ್ನು ನಾನು ತೆಗೆದುಕೊಂಡಿದ್ದೇನೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದು ಸರಿಯಲ್ಲ. ನಾನು ಖಂಡಿತ ನಿಮ್ಮ ಕ್ಷೇತ್ರದಲ್ಲಿ ಚುನಾವಣೆಗೆ ನಿಲ್ಲುವುದಿಲ್ಲ. ಎರಡನೆಯುದಾಗಿ ಬೆಂಗಳೂರು ನಗರದಲ್ಲಿ ನನಗೆ ನಿಲ್ಲುವ ಇಷ್ಟವೂ ಇಲ್ಲ. ಆದ್ದರಿಂದ ಆ ಜನರು ನನ್ನ ಹಿಂದೆ ಬರುತ್ತಾರೆಂದು ಆ ಬಗ್ಗೆ ಗಮನ ಹರಿಸಿಲ್ಲ. ಮಾನ್ಯ ಸದಸ್ಯರು ನಾನಿದ್ದಾಗಲೂ ಅನಧಿಕೃತ ಮನೆಗಳನ್ನು ಕಟ್ಟಿದ್ದಾರೆಂದು ಹೇಳಿದರು. ಹೌದು, ನಾನಿದ್ದಾಗಲೂ ಕಟ್ಟಿದ್ದಾರೆ, ಈಗಲೂ ಕಟ್ಟಿದ್ದಾರೆ. ಈಗ ವಿಪರೀತ ಕಟ್ಟಿದ್ದಾರೆ. ಎರಡು ವರ್ಷದಿಂದ ತಹಸೀಲ್ದಾರ್ ಆಫೀಸಿನಲ್ಲಿ ಇಷ್ಟು ದುಡ್ಡು ಕಟ್ಟಿದರೆ ಕನ್‌ವರ್ಷನ್ ಮಾಡಬಹುದು ಎಂದು ಏನು ನಿಯಮ ಸಡಿಲ ಮಾಡಿದರು, ಅದರಿಂದಾಗಿ ಅಷ್ಟೊಂದು ಮನೆಗಳು ಬಂದಿವೆ. ಎರಡು ವರ್ಷಗಳಿಂದೀಚೆಗೆ ಎಷ್ಟು ಮನೆಗಳು ಬಂದಿವೆ, ಅದಕ್ಕಿಂತ ಮುಂಚೆ ಎಷ್ಟು ಮನೆಗಳಿತ್ತು ಎಂಬುದನ್ನು ಬೇಕಾದರೆ ನೋಡಿ. ನಾನೆಲ್ಲಾ ಸರಿಯಾಗಿ ಮಾಡಿದ್ದೇನೆ ಎಂದು ನಾನು ಯಾವಾಗಲೂ ಹೇಳಲಿಲ್ಲ. ಈ ತರಹ ಮನೆ ಕಟ್ಟುವವರು ಮೂವತ್ತು ವರ್ಷಗಳಿಂದ ಇದ್ದಾರೆ ಎಂದು ಹೇಳಿದ್ದೇನೆ ೩೦ ವರ್ಷದಿಂದ ಎಂದರೆ ನನ್ನ ಅವಧಿಯೂ ಸೇರಲಿಲ್ಲವೆ? ನಾನು ಅಧಿಕಾರದಲ್ಲಿದ್ದಾಗ ಬುಲ್ಡೋಜರ್ ತೆಗೆದುಕೊಂಡು ಹೋಗಿ ಮನೆಗಳನ್ನು ಒಡೆದುಹಾಕಿಸಿದ ಒಂದೇ ಒಂದು ಉದಾಹರಣೆಯನ್ನು ನೀವು ಕೊಡುತ್ತೀರಾ? ನಾನು ಮ್ಯಾನೇಜ್ ಮಾಡಿಲ್ಲವೆ? ಕೆಲವರಿಗೆ ಬೇರೆ ಕಡೆ ಸೈಟ್ ಕೊಟ್ಟೆವು, ಇನ್ನು ಕೆಲವು ಕಡೆ ಮಾತುಕತೆ ನಡೆಸಿ ಬಿಟ್ಟುಕೊಡುವ ಬಗ್ಗೆ ಜನರಿಂದ ಒಪ್ಪಿಗೆ ತೆಗೆದುಕೊಂಡು ರಸ್ತೆ ಮಾಡುವುದಕ್ಕೆ, ಲೈಟ್ ಹಾಕುವುದಕ್ಕೆ, ನಲ್ಲಿ ಹಾಕುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಎಲ್ಲೆಲ್ಲಿ ಒಡೆಯಬಹುದು ಎಂಬುದನ್ನು ನೋಡಿ ಯಾವುದೇ ಗಲಾಟೆಯಾಗದಂತೆ ಕ್ರಮ ತೆಗೆದುಕೊಂಡಿದ್ದೇವೆ. ಯಾವ ಸಮಸ್ಯೆಯೂ ಆಗ ಬಂದಿರಲಿಲ್ಲ. ಈಗ ಜನ ಬಂದು ಹೀಗಾಗಿದೆ ಎಂದು ಹೇಳಿದ್ದರಿಂದ ಈ ವಿಷಯವನ್ನು ಕೈಗೆತ್ತಿಕೊಂಡಿದ್ದೇವೆಯೇ ಹೊರತು ನಿಮ್ಮ ಓಟು ಕಿತ್ತುಕೊಳ್ಳುವುದಕ್ಕಲ್ಲ. ಮಾನ್ಯ ಮುಳ್ಳೂರು ಆನಂದರಾಯರು ಧೈರ್ಯವಾಗಿರಬಹುದು. ನಾನಂತೂ ಕಿತ್ತುಕೊಳ್ಳುವುದಿಲ್ಲ. ಆ ಮೇಲೆ ಬೇರೆ ಯಾರಾದರೂ ಬಂದು ಕಿತ್ತುಕೊಂಡರೆ ಅದಕ್ಕೆ ನಾನು ಜವಾಬ್ದಾರಿಯಿಲ್ಲ.

ಶ್ರೀ ಮುಳ್ಳೂರು ಆನಂದರಾವ್.—ನಾನು ಮಾನ್ಯ ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ, ಕೂಡಲೇ ಆದೇಶ ಕೊಟ್ಟು ಡೆಮಾಲಿಷನ್ ಮಾಡುವುದನ್ನು ನಿಲ್ಲಿಸಬೇಕು. ಮತ್ತು ಶಾಸಕರ ಸಮಿತಿಯೊಂದನ್ನು ಮಾಡಬೇಕು. ಬೇಕಾದರೆ ಸಾಹುಕಾರರ ಮನೆಗಳನ್ನು ಒಡೆಯಿರಿ. ಬನ್ನೇರುಘಟ್ಟ ರಸ್ತೆಯಲ್ಲಿ ಉದ್ದಕ್ಕೂ ಫ್ಯಾಕ್ಟರಿಗೋಸ್ಕರ ಅನಧಿಕೃತವಾಗಿ ಕಟ್ಟಡಗಳು ನಿರ್ಮಾಣವಾಗಿವೆ. ಸುಸೂತ್ರವಾಗಿ ಕಟ್ಟಡಗಳು ಏಳುತ್ತಿವೆ. ಅದು ಸಾಹುಕಾರರ ಕಟ್ಟಡಗಳು. ನನ್ನ ಜೊತೆ ಬನ್ನಿ, ನಾನು ಕರೆದುಕೊಂಡು ಹೋಗುತ್ತೇನೆ. ಆ ಕಟ್ಟಡಗಳನ್ನು ಬೇಕಾದರೆ ಒಡೆಯೋಣ. ಆದರೆ ಬಡವರ ಮನೆಗಳನ್ನು ಮಾತ್ರ ಒಡೆಯಬೇಡಿ ಎಂದು ಕೇಳಿಕೊಳ್ಳುತ್ತೇನೆ.

ಕುಮಾರಿ ಎಸ್. ಪ್ರವಿಣಾ (ಚಾಮರಾಜಪೇಟೆ) —ಮಾನ್ಯ ಸಭಾಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಶ್ನೆ ಕೇಳಿದ್ದನ್ನೆಲ್ಲಾ ನಾನು ಕೇಳಿದ್ದೇನೆ. ಇಲ್ಲಿ ಮೂರು ವಿಷಯಗಳನ್ನು ಕೊಟ್ಟಿದ್ದಾರೆ. ಮೊದಲನೆಯದಾಗಿ ಚಂದ್ರ ಲೇ ಔಟ್‌ನಲ್ಲಿ ೭೦ ಕಟ್ಟಡಗಳನ್ನು ೫-೧೧-೧೯೮೫ರಂದು ಒಡೆದುಹಾಕಿದರು ಎಂದು ಹೇಳಿದ್ದಾರೆ. ನಾನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸದಸ್ಯಳಾಗಿರುವುದರಿಂದ ಆ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ಚಂದ್ರ ಲೇ ಔಟ್‌ನಲ್ಲಿ ೭೦ ಜನರು ನಾಯಿಕೊಡೆಗಳಂತೆ ಅಡ್ಡಾದಿಡ್ಡಿಯಾಗಿ ಮನೆಗಳನ್ನು ಕಟ್ಟಿರುವುದನ್ನು ೮೦೦ ಜನರಿಗೆ ಅನುಕೂಲ ಮಾಡುವ ಸಲುವಾಗಿ ಬಿ.ಡಿ.ಎ. ಯವರು ಒಡೆದುಹಾಕಿದ್ದಾರೆ. ೨೫ ಗುಡಿಸಲುಗಳು, ೪೫ ಕಟ್ಟಡಗಳನ್ನು ಅಕ್ರಮವಾಗಿ ಕಟ್ಟಿರುವುದನ್ನು ಒಡೆದುಹಾಕಿದರೆ ೮೦೦ ಜನರಿಗೆ ನೈಟುಗಳನ್ನು ಕೊಡುವುದಕ್ಕೆ ಅನುಕೂಲವಾಗುವುದರಿಂದ ಅದನ್ನು ಒಡೆದುಹಾಕಬಹುದೆಂದು ನಾವೆಲ್ಲಾ ಹೇಳಿದನಂತರ ಬಿ.ಡಿ.ಎ.ಯವರು ಕ್ರಮ ತೆಗೆದುಕೊಂಡು ಒಡೆದು ಹಾಕಿದ್ದಾರೆ ಆ ರೀತಿ ಒಡೆದುಹಾಕಿ ೮೦೦ ನೈಟುಗಳಿಗೆ ಅರ್ಜಿಗಳನ್ನು ಕಾಲ್‌ಫರ್ ಮಾಡಿದ್ದೇವೆ. ಅದಕ್ಕೆ ೨೬ ಸಾವಿರ ಅರ್ಜಿಗಳು ಬಂದಿವೆ. ಅಕ್ರಮವಾಗಿ ಕಟ್ಟಿರುವ ಕಟ್ಟಡಗಳನ್ನು ಒಡೆದುಹಾಕಿ ೮೦೦ ಜನರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಆ ಕ್ರಮವನ್ನು ಬಿ.ಡಿ.ಎ.ಯವರು ತೆಗೆದುಕೊಂಡಿದ್ದಾರೆಯೇ ಹೊರತು ಬಡವರ ಮನೆಗಳನ್ನು ಒಡೆಯಬೇಕು ಎಂಬ ಉದ್ದೇಶದಿಂದಲ್ಲ. ಯಾರ ಯಾರ ಮನೆಗಳನ್ನು ಒಡೆದುಹಾಕಿದ್ದೇವೆಯೋ ಅವರಿಗೆಲ್ಲಾ ಬೇರೆ ಕಡೆ ನಿವೇಶನಗಳನ್ನು ಕೊಟ್ಟಿದ್ದೇವೆ. ಅವರಿಗೇನೂ ಅನ್ಯಾಯ ಮಾಡಿಲ್ಲ. ಜಾರಕಬಂಡೆ ಕಾಸಲ್‌ನಲ್ಲಿ ೧೨ ಗುಡಿಸಲುಗಳನ್ನು ಒಡೆದಿದ್ದಾರೆ. ಸುಪ್ರೀಂ ಕೋರ್ಟಿನಲ್ಲಿ ಒಂದು ಕೇಸಿತ್ತು. ಏನೆಂದರೆ ತರಗುಪೇಟೆಯಲ್ಲಿರತಕ್ಕ ಎಲ್ಲ ಅಂಗಡಿಗಳವರಿಗೆ ಕಟ್ಟಡ ಕಟ್ಟಲು ಬಿ.ಟಿ.ಎಂ ಸಿ.ಯವರಿಗೆ ಜಾಗ ಕೊಡಬೇಕೆಂದು ಹೇಳಿದಾಗ ಕಮಿಷನರ್ ಅವರು ಬಂದು ಅಲ್ಲಿ ಇನ್‌ಸ್ಪೆಕ್ಷನ್ ಮಾಡತಕ್ಕ ಸಂದರ್ಭದಲ್ಲಿ ೧೨ ಗುಡಿಸಲುಗಳಿದ್ದುದನ್ನು ನೋಡಿ ಅವುಗಳಿದ್ದರೆ ಅಂಗಡಿಗಳನ್ನು ಕಟ್ಟುವುದಕ್ಕಾಗುವುದಿಲ್ಲ ಎಂದು ವ್ಯಾಪಾರಸ್ಥರು ಸುಪ್ರೀಂ ಕೋರ್ಟಿಗೆ ಹೋಗಿ ಗಲಾಟೆ ಮಾಡಿದಾಗ ೧೨ ಗುಡಿಸಲುಗಳನ್ನು ತೆಗೆದುಹಾಕಿದರೆ ಸಹಸ್ರಾರು ಮಂದಿ ವರ್ತಕರಿಗೆ ಮಾರ್ಕೆಟ್ ಯಾರ್ಡ್‌ಗೆ ಷಿಫ್ಟ್ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ಬಿ.ಡಿ.ಎ.ಯವರು ಕ್ರಮ ತೆಗೆದುಕೊಂಡರು. ತಾವರೆಕೆರೆಯಲ್ಲಿ ೨೫ ಕಟ್ಟಡಗಳನ್ನು ಡೆಮಾಲಿಷ್ ಮಾಡಿದ ಬಗ್ಗೆ ಅವರು ಹೇಳುತ್ತಿದ್ದರು.

ಶ್ರೀ ಜೀವರಾಜ್ ಆಳ್ವ.—ಮಾನ್ಯ ಸದಸ್ಯರು ಬಿ.ಡಿ.ಎ. ಸರವಾಗಿ ಉತ್ತರ ಕೊಡುತ್ತಿದ್ದಾರಾ?

ಶ್ರೀ ಎಸ್. ಪ್ರವಿಣಾ.—ಅನ್ಯಾಯ ಮಾಡಿದ್ದೀರಿ, ಅಕ್ರಮ ಮಾಡಿದ್ದೀರಿ ಎಂದು ಅವರು ಹೇಳಿದ್ದರಿಂದ ನಾನು ಬಿ.ಡಿ.ಎ. ಸದಸ್ಯಳಾಗಿ ಎಲ್ಲ ವಿಷಯವನ್ನೂ ಹೇಳಬೇಕಾಗಿದೆ, ಆದ್ದರಿಂದ ಹೇಳುತ್ತಿದ್ದೇನೆ. ತಾವರೆಕೆರೆಯಲ್ಲಿ ಒಂದು ಸಾವಿರ ಜನರಿಗೆ ದುರ್ಬಲವರ್ಗದವರಿಗೆ ಹರಿಜನಗಿರಿಜನರಿಗೆ ಉಚಿತವಾಗಿ ನಿವೇಶನವನ್ನು ಕೊಡಬೇಕೆಂದು ನಿರ್ಣಯ ತೆಗೆದುಕೊಂಡಾಗ ಕೆಲವು ಏಜೆಂಟರುಗಳು ರಾತ್ರೋರಾತ್ರಿ ಅಕ್ರಮವಾಗಿ ಕಟ್ಟಿದ ಕಟ್ಟಿರುವ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ. ಕಟ್ಟಡಗಳನ್ನು ಒಡೆದುಹಾಕಿದ್ದೇವೆ. ಅದರ ಪರಿಣಾಮವಾಗಿ ೧೬ನೇ ತಾರೀಖಿನ ಒಂದು ಸಾವಿರ ಜನ ನಿವೇಶನರಹಿತರಿಗೆ ಒಂದು ಸಾವಿರ ನೈಟುಗಳನ್ನು ಕೊಡುವುದಕ್ಕೆ ಏರ್ಪಾಡು ಮಾಡಿದ್ದೇವೆ. ಬಿ.ಡಿ.ಎ.ಯವರು ಯಾವುದೇ ಸಂದರ್ಭದಲ್ಲೂ ಅಕ್ರಮವಾಗಿ ಕಟ್ಟಡಗಳನ್ನು ಒಡೆದುಹಾಕಿಲ್ಲ. ಕೆಲವು ಜನರು ಅನ್ಯಾಯವಾಗಿ ರೀ-ಕನ್ವೇಯನ್ಸ್ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಪಟ್ಟಾಗ ಮಾತ್ರ ಆ ರೀತಿ ಮಾಡಬೇಕಾಗಿ ಬಂತು. ಇನ್ನು ರೀಜಾಯಿಡರ್ ವಿಷಯ ಹೇಳಬೇಕೆಂದರೆ, ಅಲ್ಲಿ ಏಕೆ ಹೀಗಾಯಿತು ಎಂದು ಕೇಳಿದರು. ಅಲ್ಲಿ ಅಷ್ಟು ಜನ ಕೂಡ ಹೈಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡು ಬಂದರು. ತಕ್ಷಣ ವೆಕೇಟ್ ಮಾಡಿ ಎಂದು ಹೇಳಿದಾಗ ೬೮ ಕೇಸ್‌ಗಳಲ್ಲಿ ವೆಕೇಟ್ ಆಯಿತು. ಅದರ ಬಗ್ಗೆ ಕೂಡ ಕಾರ್ಯಕ್ರಮ ತೆಗೆದುಕೊಳ್ಳಲಾಗುತ್ತದೆ. ಇಡೀ ಬೆಂಗಳೂರು ನಗರದ ಸೌಂದರ್ಯವನ್ನು ಕಾಪಾಡುವ ದೃಷ್ಟಿಯಿಂದ, ಬೆಂಗಳೂರಿನ ನಾಗರೀಕರಿಗೆ ಮನೆ ನಿವೇಶನಗಳನ್ನು ಒದಗಿಸಬೇಕು ಎನ್ನುವ ದೃಷ್ಟಿಯಿಂದ ಇಡೀ ನಗರದಲ್ಲಿ ಎಲ್ಲೆಲ್ಲಿ ಅಕ್ರಮವಾಗಿ ಮನೆಗಳನ್ನು ಕಟ್ಟುತ್ತಿದ್ದಾರೆ ಅವರಿಗೆ ಸಪೋರ್ಟ್ ಮಾಡಬಾರದೆಂದು ನಾನು ಕೇಳಿಕೊಳ್ಳುತ್ತೇನೆ. ದೇಶದ ನಾನಾ ಕಡೆಯಿಂದ, ಮದ್ರಾಸ್‌ನಿಂದ, ಕೇರಳದ ಕಡೆಯಿಂದ ಜನ ಬಂದು ರಾತ್ರೋ ರಾತ್ರಿ ಅಕ್ರಮವಾಗಿ ಮನೆಗಳನ್ನು ಕಟ್ಟುತ್ತಿರುವುದನ್ನು ಸಪೋರ್ಟ್ ಮಾಡುವುದಾದರೆ ಇನ್ನು ಮೂರು ದಿನಗಳಲ್ಲಿ ಇಂತಹ ೩ ಸಾವಿರ ಮನೆಗಳನ್ನು ಅವರು ಕಟ್ಟಬಹುದೆಂದು ನಾನು ಹೇಳುತ್ತೇನೆ. ಕಾನೂನು ಪ್ರಕಾರ ನೋಟೀಸ್ ಕೊಟ್ಟು, ಕಾರ್ಯಕ್ರಮ ತೆಗೆದುಕೊಂಡು ಬೆಂಗಳೂರು ಜನತೆಗೆ ನ್ಯಾಯ ಒದಗಿಸಿಕೊಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಕಳೆದ ಮೂರು ತಿಂಗಳಿಂದ ನಗರದ ಕೆಲವು ಭಾಗಗಳಲ್ಲಿ ಏನು ಅಕ್ರಮ ಕಟ್ಟಡಗಳ ನಿರ್ಮಾಣ ಆಗುತ್ತಿವೆ ಅವುಗಳನ್ನು ಕೆಡವುದಕ್ಕೆ ಹೊರಟಿದ್ದಾರೆ. ಈ ಸಂದರ್ಭದಲ್ಲಿ ಮುಖ್ಯವಾಗಿ ರಾಜಾಜಿನಗರ, ಜಯನಗರ ಜಯಮಹಲ್ ಮುಂತಾದ ಕಡೆಗಳಲ್ಲಿ ಏನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಹತ್ತಾರು ವರ್ಷಗಳ ಹಿಂದೆ ಲೇ ಔಟ್ ಮಾಡಬೇಕೆಂದು ಜಾಗವನ್ನು ನಿಗಧಿಪಡಿಸಿದ್ದರೋ ಆ ಜಾಗದಲ್ಲಿ ಅನಧಿಕೃತ ಕಟ್ಟಡಗಳು ಏಳುತ್ತಿವೆ. ನಗರದ ಶಾಸಕರಾದ ನಾವು ಈ ಬಗ್ಗೆ ಒತ್ತಾಯವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರ ಮೇಲೆ ತಂದು, ಈ ರೀತಿ ಮಾನಸ್ಸಿಗೆ ಬಂದ ಹಾಗೆ ಕೆಣಕುವುದು ಸರಿಯಲ್ಲವೆಂದು ಹೇಳಿದೆವು. ಹತ್ತು ವರ್ಷಗಳ ಹಿಂದೆ ನೋಟಿಫೈ ಮಾಡಿ ಅಕ್ವೈರ್ ಮಾಡದೆ ಈಗ ಜನ ಅಲ್ಲಿ ಕಟ್ಟಿಡ ಕಟ್ಟಿದ್ದಾರೆಂದು ಹೇಳಿ ಈ ರೀತಿ ಮಾಡಬಾರದು ಎಂದು ಅವರ ಮೇಲೆ ಒತ್ತಾಯ ತಂದೆವು. ನಮ್ಮ ಬೆಂಗಳೂರು ನಗರದ ಒಂದು ಮಾಸ್ಟರ್ ಪ್ಲಾನ್ ಏನಿದೆ ಅದರ ರೀತಿ ನಮ್ಮ ನಗರ ಬೆಳೆದಿಲ್ಲ. ಈಗ ಒಂದೆರಡು ಮನೆಗಳನ್ನು ಕೆಲವು ಕಡೆ ಕಟ್ಟಿಕೊಂಡಿದ್ದಾರೆ. ಆ ಬಗ್ಗೆ ಕ್ರಮ ತೆಗೆದುಕೊಳ್ಳಬಹುದಾದರೂ. ಅನೇಕ ಕಡೆ ನ್ಯೂರು, ಇನ್ನೂರು, ಮುನ್ನೂರು ಮನೆಗಳನ್ನೇನು ಕಟ್ಟಿದ್ದಾರೆ ಹಾಗೂ ರಸ್ತೆ ಹಾಗೂ ಮತ್ತಿತರ ವಿಷಯಗಳಲ್ಲಿ ಜಾಗ ಬಿಟ್ಟು ಮನೆಗಳನ್ನು ಕಟ್ಟಿದ್ದಾರೆ, ಇಲ್ಲಿನ ಮನೆಗಳನ್ನು ಒಡೆಯುವುದು ಸರಿಯಾದುದಲ್ಲ. ಇವುಗಳನ್ನು ರೀಕನ್ವೇ ಮಾಡಬೇಕಾಗುತ್ತದೆ. ಕೆಲವು ಕಡೆ ಏನು ನೂರು ಇನ್ನೂರು ಅಡಿಗಳಷ್ಟು ಜಾಗದಲ್ಲಿ ಬೇಲಿ ಹಾಕಿಕೊಂಡು ಒಂದು ಸಣ್ಣ ಶೆಡ್ಡನ್ನು ಮಧ್ಯದಲ್ಲಿ ಹಾಕಿಕೊಂಡು ಅದನ್ನು ಬೇರೆಯವರಿಗೆ ಮಾರುವ ಬಗ್ಗೆ ವ್ಯವಹಾರಕ್ಕೆ ತೊಡಗಿದ್ದಾರೆ ಇದು ಆಗಬಾರದು ಎಂದು ನಾನು ಹೇಳುತ್ತೇನೆ. ಮಾಸ್ಟರ್ ಪ್ಲಾನ್ ಪ್ರಕಾರ ರಸ್ತೆ ಹಾಗೂ ಸಿವಿಲ್ ಅಮಿನಿಟೀಸ್‌ಗೆ ಜಾಗ ಬಿಟ್ಟು ಮನೆ ಕಟ್ಟಿಕೊಂಡಿದ್ದಾರೆ ಅಲ್ಲಿನ ಮನೆಗಳನ್ನು ಒಡೆಯುವುದಕ್ಕೆ ಹೋಗಬೇಡಿ. ಅಲ್ಲಿನ ರಸ್ತೆಗಳನ್ನು ಏನಾದರೂ ದೊಡ್ಡದು ಮಾಡಬೇಕಾದ ಪಕ್ಷದಲ್ಲಿ ೨ ಅಡಿಯೋ ೫ ಅಡಿಯೋ ಜಾಗವನ್ನು ಪಡೆದುಕೊಳ್ಳಿ. ಹಾಗೂ ಮಾನ್ಯ ದೇವರಾಜ ಅರಸ್ ಅವರು ಒಂದು ಮಾತನ್ನು ಹೇಳಿದರು ಈಗಿನ ಮಾಸ್ಟರ್ ಪ್ಲಾನ್ ಪ್ರಕಾರ ಎಲ್ಲೆಲ್ಲಿ ರಸ್ತೆಗಳನ್ನು ನಿರ್ಮಿಸಬೇಕಾಗಿತ್ತೋ ಅಲ್ಲಿ ಹಾಲಿ ಮನೆಗಳನ್ನು ಕಟ್ಟಿದ್ದ ಪಕ್ಷದಲ್ಲಿ ಆ ಮನೆಗಳನ್ನು ಕೆಡವದೆಯೇ ಪಕ್ಕದಲ್ಲೇ ಪ್ಯಾರ್ಲರ್ ಆಗಿ ಬದಲಿ ರಸ್ತೆಯನ್ನು ನಿರ್ಮಾಣ ಮಾಡಬಹುದಾಗಿದೆ. ಯಾವ ಜಾಗದಲ್ಲಿ ರಸ್ತೆ ಬಿಡುವುದಕ್ಕೂ ಜಾಗ ಇಲ್ಲ. ಇತರ ಸೌಲಭ್ಯಗಳನ್ನು ಒದಗಿಸುವುದಕ್ಕೆ ಸಾಧ್ಯವಿಲ್ಲ ಅಂತಹ ಕಡೆ ಅವರಿಗೆ ಪರಿಹಾರ ಕೊಟ್ಟು ಆದ ನಂತರ ಅವನ್ನು ಕೆಡವುದಕ್ಕೆ ಹೋಗಬೇಕೇ ಹೊರತು ಈ ರೀತಿ ಮಾಡುವುದು ಸರಿಯಲ್ಲ. ಮಾಸ್ಟರ್ ಪ್ಲಾನ್ ಪ್ರಕಾರ ಎಲ್ಲಿ ರಸ್ತೆ ಬರುತ್ತದೆ, ಎಲ್ಲಿ ಏನು ಬರುತ್ತದೆ ಎಂಬುದು ಅಲ್ಲಿನ ಅಧಿಕಾರಿಗಳಿಗೇ ಸರಿಯಾಗಿ ಗೊತ್ತಿಲ್ಲ. ಆದ್ದರಿಂದ ಸಾರ್ವಜನಿಕರಿಗೆ ತೊಂದರೆ ಆಗದ ಹಾಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ನಾನು ಈ ಮೂಲಕ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

SRI ALVA JEEVARAJ.—Mr. Speaker Sir, I only confine myself to the conclusive part of the Minister's statement. It reads thus :

> "In this connection I am happy to bring to the notice of the august House that the B.D.A. has planned to provide 1000 free sites in the newly formed lay outs of Madivala and Tawarekere to the needy people and the title deeds will be given on 16th by the Chief Minister."

Sir, I would like to point out to you, there are more than 20 lakhs of people who are siteless in the City of Bangalore. We are only worried that this should not be a scandal again because there have been parellels in different states that the application had been channelised through the Congress Party in power. Therefore, I want to know, what is the criteria of selection of these 1000 siteless people and whether applications were invited by the B.D.A ?

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಹೊಸ ಅಧ್ಯಕ್ಷರು ಬಂದಮೇಲೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ ಹಾಗೂ ಅಲ್ಲಿ ಏನೇನಾಂ ಕೆಲಸ ಮಾಡಿದ್ದಾರೆ ಎಂಬುದನ್ನು ಬಹಳ ವಿವರವಾಗಿ ಮಾನ್ಯ ಸದಸ್ಯರಾದ ಶ್ರೀ ದೇವರಾಜ ಆರಸ್ ಅವರು, ಶ್ರೀ ಲಕ್ಷ್ಮೀನಾರಾಯಣ ಅವರು, ಶ್ರೀಮತಿ ಪುಟ್ಟಮ್ಮ ಅವರು, ಶ್ರೀ ಜೀವರಾಜ ಆಳ್ವ ಅವರು, ಶ್ರೀ ರಾಮಚಂದ್ರೇಗೌ ಅವರು, ಶ್ರೀ ಚಂದ್ರಶೇಖರ್ ಅವರು ಹಾಗೂ ಶ್ರೀ ಮಲ್ಲೂರು ಆನಂದರಾವ್ ಅವರು ಹೇಳಿದ್ದಾರೆ. ಬಂದು ಮಾತು ಹೇಳುತ್ತೇನೆ ಅಧ್ಯಕ್ಷರೆ. ಬೆಂಗಳೂರು ಜನಸಂಖ್ಯೆ ದಿನೇ ದಿನೇ ಬೆಳೆಯುತ್ತಿದೆ. ಇದನ್ನು ಗಮನದಲ್ಲಿ ಇಟ್ಟುಕೊಂಡು ಬರತಕ್ಕಂತಹ ೨೦೦೦ ಎ.ಡಿ. ಆಷ್ಟೊತ್ತಿಗೆ ಬೆಂಗಳೂರು ಜನಸಂಖ್ಯೆ ೬೦ ಲಕ್ಷಕ್ಕಿಂತ ಜಾಸ್ತಿ ಹೋಗುವಾರದು ಎನ್ನುವ ದೃಷ್ಟಿಯಿಂದ. ಬೆಂಗಳೂರು ನಗರದ ಜನರಿಗೆ ಎಲ್ಲಾ ಸೌಕರ್ಯಗಳು ಕಾರ್ಪೊರೇಷನ್‌ನಿಂದ ಹಾಗೂ ವಾಟರ್ ಬೋರ್ಡ್‌ನಿಂದ ಮತ್ತು ಇತರ ಮೂಲಗಳಿಂದ ಒದಗಿಸಿ ಕೊಡಬೇಕೆನ್ನುವ ದೃಷ್ಟಿಯಿಂದ ಬೆಂಗಳೂರು ನಗರದಲ್ಲಿರತಕ್ಕ ಸ್ಲಮ್ಸ್ ಜನರಿಗೆ ಸೈಟ್‌ಗಳನ್ನು ಕೊಡುವ ದೃಷ್ಟಿಯಿಂದ ಬರತಕ್ಕಂತಹ ಲೇಔಟ್‌ಗಳು ವ್ಯವಸ್ಥಿತ ರೀತಿಯಲ್ಲಿ ಇರಬೇಕು ಎನ್ನುವುದೇ ನಮ್ಮ ಉದ್ದೇಶ ಆಗಿದೆ. ಈ ಬಗ್ಗೆ ಸಲಹೆಸೂಚನೆಗಳು ಇವೆ. ಈ ಸಲಹೆಸೂಚನೆಗಳು ಒಂದೇ ಕಾಲದಲ್ಲಿ ಬಂದಿರುವಹಾಗಿಲ್ಲ. ಬೆಂಗಳೂರು ನಗರದಲ್ಲಿ ಈ ರೀತಿ ರೆವಿನ್ಯೂ ಜಾಗದಲ್ಲಿ ಅನಧಿಕೃತ ಕಟ್ಟಡಗಳು ಏನು ಹಿಂದಿನಿಂದಲೂ ಬಿಳುತ್ತಾ ಬಂದಿವೆ ಇವನ್ನು ಹಿಂದಿನ ಸರ್ಕಾರಗಳು ತಡೆಯುತ್ತಾ ಬಂದಿದ್ದರೆ ಇದತ್ತು ಈ ಅನಾಹುತ ಬರುತ್ತಾ ಇರಲಿಲ್ಲ. ಬೆಂಗಳೂರು ನಗರದಲ್ಲಿ ಇರತಕ್ಕ ಸಮಸ್ಯೆಗಳನ್ನು ಯಾವ ರೀತಿ ಬಗೆಹರಿಸಬೇಕೆನ್ನುವ ರೀತಿಯಲ್ಲಿ ಎಲ್ಲಾ ಸಲಹೆ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡಿದ್ದೇವೆ. ಈ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಕೆ. ಕೆ. ಮೂರ್ತಿಯವರೂ ಸಹ ಸಾಕಷ್ಟು ಸಲ ಬೆಂಗಳೂರು ನಗರದ ಬಗ್ಗೆ ಸಮಾಲೋಚನೆ ಮಾಡಿದ್ದಾರೆ. ಇದತ್ತು ಏನು ಎಂದೆರೆದು ಲೇಔಟ್‌ಗಳಲ್ಲಿ ಅನಾಹುತ ಆಗಿದೆ, ಅಂತಹ ಒಂದು ವಾತಾವರಣ ಆಗಿದೆ ಎಂದು ಹೇಳುತ್ತಿದ್ದಾರೆ ಆ ಬಗ್ಗೆ ಬೆಂಗಳೂರು ನಗರದ ಸೌಂದರ್ಯ ಕಾಪಾಡುವ ದೃಷ್ಟಿಯಿಂದ ಗಾರ್ಡನ್ ಏರಿಯಾದಲ್ಲಿ ಹಿದ್ದಾಪಡಿ ಮಾಡಿ ಏನು ಅಧಿಕಾರ ಹಡೆದುಕೊಂಡು ಏನು ಸಾಧ್ಯವಾಟ್ಟಿ ಮನೆಗಳು ಇದ್ದವೆ, ಏನು ನೀರನ ಕೊಳಾಯಿ ಪೈಪ್‌ಗಳನ್ನು ಹಾಕುವುದಕ್ಕೂ ಜಾಗ ಬಿಡದೆ ಮನೆ ಕಟ್ಟಿಕೊಂಡಿದ್ದಾರೆ ಅಂತಹ ಕಡೆ ಸಾರ್ವಜನಿಕರ ಹಿತದೃಷ್ಟಿಯಿಂದ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೇವೆ ಅದಕ್ಕೆ ಆಡಳಿತ ಪಕ್ಷದವರಾಗಲೀ ವಿರೋಧ ಪಕ್ಷದವರಾಗಲೀ ಎಲ್ಲರೂ ಸಹಕಾರ ಮಾಡಬೇಕಾಗುತ್ತದೆ. ಇತ್ತೀಚೆಗೆ ಚಿಂದ್ರ ಜಾವಣಿಯಲ್ಲಿ ೭೦ ಮನೆಗಳಾಗಿದ್ದವು, ರಸ್ತೆಯಲ್ಲಿ ಬರತಕ್ಕಂಥ ಕೆಲವು ಮನೆಗಳನ್ನು ಒಡೆದು ಹಾಕಿದ್ದೇವೆ. ಮಾನ್ಯ ದೇವರಾಜ್ ಅರಸ್ ಅವರು ೧೧ನೇ ತಾರೀಖು ಸ್ವೇ ಇತ್ತು ಎಂದು ಹೇಳಿದರು. ೨೧ನೇ ತಾರೀಖು ಸ್ವೇ ಇದ್ದುದು ನಿಜ. ನಮ್ಮ ಆಫೀಸಿಗೆ ೧೧ನೇ ತಾರೀಖು ಬಂದಿದೆ. ನಾವು ಹೈಕೋರ್ಟಿಗೆ ಮಾಡಲಿಕ್ಕೆ ಹೋಗಿರಲಿಲ್ಲ. ವೀಸ್ಟೂರ್ಕೇಷನ್ ಮಾಡಲಿಕ್ಕೆ ಹೋಗಿದ್ದೆವು. ಮಾನ್ಯ ಸದಸ್ಯರಾದ ಮಲ್ಲೂರು ಆನಂದರಾಯರು ಕಂಟ್ರಾಕ್ಟರಿಗೆ ಭಾಮೀಲಾಗಿ ಈ ಕೆಲಸ ಮಾಡಿದ್ದಾರೆ ಎಂದು ಹೇಳಿದರು ಆ ರೀತಿ ಏನೂ ಮಾಡಿಲ್ಲ. ಕಂಟೆಮ್ಪ್ಟ್ ಆಫ್ ದಿ ಕೋರ್ಟು ಕೂಡ ಆಗುವುದಿಲ್ಲ. ಬಿ ಡಿ ಎ ಗೆ ಸಂಬಂಧಪಟ್ಟಂತೆ ಅನೇಕ ಸಮಸ್ಯೆಗಳಿರುವುದು ಮಾನ್ಯ ಸದಸ್ಯರುಗಳಿಗೆ ಗೊತ್ತಿದೆ. ಒಂದು ಸೈಟು ೧೦-೧೦ ಜನರಿಗೆ ಕೊಟ್ಟಿದ್ದಾರೆ. ಹೊಸ ಸರ್ಕಾರ ಬಂದಮೇಲೆ ಏಷ್ಟೋ ಕೇಸುಗಳನ್ನು ತನಿಖೆ ಮಾಡಿಸಿದೆ. ಸಾಮಾನ್ಯ ಜನರನ್ನು ಒಯಿಯು ಹಾಕಿದ್ದೇವೆ. ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ತೆಗೆದುಕೊಂಡಿದ್ದೇವೆ. ನಮ್ಮ ಸರ್ಕಾರ ಜಾರಿಯಾದಕ್ಕೆ ಕೆಲಸಗಳಿಗೆ ಆಧ್ಯತೆ ಕೊಡಬೇಕಾಗಿದೆ. ೧೯೭೧ರ ಜನಗಣತಿ ಪ್ರಕಾರ ಬೆಂಗಳೂರು ನಗರದಲ್ಲಿ ೧೩ ಲಕ್ಷ ಜನ ವಾಸ ಮಾಡುತ್ತಿದ್ದರು. ಇವತ್ತಿನ ದಿವಸ ೨೯ ಲಕ್ಷ ವಾಸ ಮಾಡುತ್ತಿದ್ದಾರೆ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಇವತ್ತು ಕೆಲಸ ಮಾಡಬೇಕಾಗಿದೆ. ೭೦ರಲ್ಲಿ ಬೆಂಗಳೂರು ನಗರ ೭೫ನೇ ಸ್ಥಾನದಲ್ಲಿತ್ತು, ಇವತ್ತು ೫೫ನೇ ಸ್ಥಾನಕ್ಕೆ ಬಂದಿದೆ. ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯನ್ನು ಹಿಟ್ಟು ೫೦ ಕಿಲೋಮೀಟರ್ ಒಳಗಡೆ ಬರತಕ್ಕ ಎಲ್ಲಾ ಹಳ್ಳಿಗಳಿಗೆ ಸಂಬಂಧ ಪಟ್ಟಂತೆ ವಿಲೇಜ್ ಪಂಚಾಯಿತಿ ಹೊಸದೇ ಆಕ್ಟಿಗೆ ತಿದ್ದುಪಡಿಯನ್ನು ತರಬೇಕೆಂದು ವಿಚಾರ ಮಾಡಿದ್ದೇವೆ. ಇದರ ವ್ಯಾಪ್ತಿಯಲ್ಲಿ ಬರತಕ್ಕ ಖಾಲಿ ನಿವೇಶನಗಳಲ್ಲಿ ಮನೆಗಳು ಬಾರದೆ ಇವುಗಳ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಪ್ರಾಧಿಕಾರವಾಗಲೀ, ನೀರು ಸರಬರಾಜು ಮಂಡಲಿಯಾಗಲೀ ಒಂದಕ್ಕೊಂದು ಸಹಭಾಗಿತ್ವದಲ್ಲಿ ಕೆಲಸ ಮಾಡಿಕೊಂಡು ಹೋಗುವಂಥ ಒಂದು ವಾತಾವರಣವನ್ನು ನಿರ್ಮಾಣ ಮಾಡಲಾಗುತ್ತಿದೆ. ಬೆಂಗಳೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಬಿ.ಸಿ.ಎ. ಆಗಿ ನೋಟಿಫಿಕೇಷನ್ ಆಗಿದೆ. ಅದೇ ರೀತಿ ಬೇರೆ ಕಡೆ ಪತಕ್ಕೆ ನೋಟಿಫಿಕೇಷನ್ ಆಗಿಲ್ಲ

ವೆನ್ನುವ ಗಹನವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆಯೂ ನಾವು ವಿಚಾರ ಮಾಡಂತ್ತಿದ್ದೇವೆ. ಮುತ್ತೆ ರವಿನ್ಯೂ ಭೂಮಿಯಲ್ಲಿ ಹಂಗಾಮಿಯಾಗಿ ಮನೆಗಳನ್ನು ಕಟ್ಟುವುದನ್ನು ತಡೆಯುವುದಕ್ಕೆ ಯಾವ ರೀತಿಯ ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ಯೋಚನೆ ಮಾಡುತ್ತಿದ್ದೇವೆ. ದೊಡ್ಡವರಾಗಿರಲಿ, ಸಣ್ಣವರಾಗಿರಲಿ ಹಂಗಾಮಿಯಾಗಿ ಕಟ್ಟಿರತಕ್ಕ ಕಟ್ಟಡಗಳನ್ನು ಯಾವ ಒಂದು ಒತ್ತಡಕ್ಕೂ ಮಣಿಯದೆ ಒಡೆದು ಹಾಕುತ್ತೇವೆ. ಮಹಾತ್ಮ ಗಾಂಧಿ ರಸ್ತೆಯಲ್ಲಿ, ಭಾರತ ಟಾಕೀಸಿನ ಪಕ್ಕದಲ್ಲಿದ್ದಂತ ಕಟ್ಟಡಗಳನ್ನು ಒಡೆದು ಹಾಕಿದ್ದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಬಿ.ಡಿ.ಎ. ಉದ್ದೇಶ ಬಡವರಿಗೆ ಕಿರುಕುಳ ಕೊಡತಕ್ಕದ್ದಲ್ಲ. ಬೆಂಗಳೂರು ನಗರವನ್ನು ಸರಿಯಾದ ರೀತಿಯಲ್ಲಿ ಕ್ರಮಬದ್ಧವಾಗಿ ಬೆಳೆಸಬೇಕೆಂಬುದೇ ಆಗಿದೆ. ೪೦-೫೦ ಎಕರೆ ಪ್ರದೇಶದಲ್ಲಿ ಅಲ್ಲೊಂದು ಇಲ್ಲೊಂದು ಮನೆಗಳನ್ನು ಕಟ್ಟಿದ್ದಾರೆ. ಇಂಥವರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ, ಮನೆಗಳನ್ನು ಒಡೆದು ಹಾಕಿದಮೇಲೆ ಅಂತವರಿಗೆ ಬೇರೆ ಕಡೆ ನಿವೇಶನಗಳನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಮಾನ್ಯ ಸದಸ್ಯರುಗಳೆಲ್ಲರೂ ನಿಷ್ಪಕ್ಷಪಾತವಾಗಿ ಈ ವಿಚಾರದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂಬ ಗಂಭೀರವಾದ ಪ್ರಶ್ನೆಯನ್ನು ಎತ್ತಿದ್ದಾರೆ. ಆ ವಿಚಾರದಲ್ಲಿಯೂ ಸರ್ಕಾರ ಸೂಕ್ತವಾದ ಗಮನವನ್ನು ಕೊಡುತ್ತದೆ. ಬಿ.ಡಿ.ಎ. ಅಧ್ಯಕ್ಷರೂ ನಗರ ಮತ್ತು ಇತರೆ ಶಾಸಕರನ್ನು ಕರೆಸಿ, ಅವರೊಡನೆ ಬಿ.ಡಿ.ಎ. ತೆಗೆದುಕೊಂಡಿರುವ ಕಾರ್ಯಕ್ರಮಗಳ ಬಗ್ಗೆ ಸಮಾಲೋಚನೆ ಮಾಡಿದ್ದಾರೆ. ಯಾವುದೇ ರೀತಿಯಲ್ಲೂ ಜನರಿಗೆ ತೊಂದರೆ ಕೊಡುವ ಉದ್ದೇಶವಾಗಲೀ, ಅವರನ್ನು ಬೆದರಿಸುವ ಉದ್ದೇಶವಾಗಲೀ ಸರ್ಕಾರಕ್ಕಿಲ್ಲ. ಕೊಳೆಗೇಂಗಳನ್ನು ಹೀಗೆ ಬಿಟ್ಟುಕೊಂಡು ಹೋದರೆ, ಇನ್ನು ೨೦ ವರ್ಷಗಳಲ್ಲಿ ಬೆಂಗಳೂರು ನಗರದ ಅಂದ ಸಂಪೂರ್ಣವಾಗಿ ಹೋಗುತ್ತೆ ಎನ್ನುವ ದೃಷ್ಟಿಯಿಂದ ಇವತ್ತು ಹಂಗಾಮಿಯಾಗಿ ಬರತಕ್ಕ ಕಟ್ಟಡಗಳನ್ನು ಗುರುತಿಸಲುಗಳನ್ನು ನಾಶಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಬಿ.ಡಿ.ಎ. ತೆಗೆದುಕೊಂಡಿರತಕ್ಕ ಈ ಒಂದು ಕಾರ್ಯಕ್ರಮಕ್ಕೆ ಶಾಸಕರೂ ನಾಗರೀಕರೂ ಎಲ್ಲರೂ ಸಹಕಾರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಬಿ.ಡಿ.ಎ. ಆವ್ಯವಹಾರಗಳ ಬಗ್ಗೆ ಮತ್ತು ಇತರೆ ಕೆಲಸಕಾರ್ಯಗಳ ಬಗ್ಗೆ ಮಾನ್ಯ ಸದಸ್ಯರುಗಳು ಹೇಳಿರುವುದನ್ನು ನೋಟ್ ಮಾಡಿಕೊಂಡಿದ್ದೇವೆ. ಇವುಗಳ ಬಗ್ಗೆ ಕೂಡ ಹೆಚ್ಚಿನ ಕಾಳಜಿ ವಹಿಸುತ್ತೇವೆಂದು ಹೇಳಿ ನನ್ನ ಮಾತನ್ನು ಮುಂಗಿಸುತ್ತೇನೆ.

(iii) re : Assault on the Principal First Grade College at Sira Police Station.

ಶ್ರೀ ಸಾ. ಲಿಂಗಯ್ಯ.—ದಿನಾಂಕ ೨೩-೧-೮೨ರಂದು ಶಿರಾ ಪ್ರಥಮ ದರ್ಜೆ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಸಿ. ಎನ್. ನರಸಿಂಹಮೂರ್ತಿಯವರನ್ನು, ತುಮಕೂರಿನ ಎಸ್.ಪಿ ಸಾಹೇಬರವರೂ ಬೆಳಿಗ್ಗೆ ೧೧-೩೦ಕ್ಕೆ ಶಿರಾ ಪೋಲೀಸ್ ಠಾಣೆಗೆ ಕರೆಸಿ, ಅಪಾಚ್ಯ ಶಬ್ದಗಳಿಂದ ಬೈದು, ಅವರನ್ನು ಬಂಧನ ಮಾಡಿದ್ದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

SRI DHARAM SINGH.—(Hon Minister for Housing and urban Development) on belhalf of the Hon Chief Minister, I would like to make the following statements.

A complaint was filed by one Sri Varadaraju, an inmate of a Students hostel in Sira that on 21.1.82, a group of students had attacked the hostel, entered his room, assaulted him and caused injuries to him. A case was registered in the Sira Police Station under Sections 143, 147, 148, 149, 448, 449 I. P. C. Thirteen students were arrested in this connection. To bring the situation under control S. 144 Cr. P. C. was promulgated and the College was closed till 2.2.82.

There were allegations that the Principal of the First Grade College, Sira, one Sri Narasimhamurthy had instigated the attack